# ಅಖಿಲ ಭಾರತ ಪತ್ರಿಕೆ

**ಸಂಪಾದಕರು, ಧಾರವಾಡ**
ಡಾ॥ ಕೆ.ಎಸ್. ಆಮೂರ,
ಎಂ.ಎಸ್ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಅಧ್ಯಕ್ಷರು, ಶ್ರೀ ಅರವಿಂದೋ ಸೊಸೈಟಿ
ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org

## ಪರಿವಿಡಿ

**"ಫೆಬ್ರವರಿ 29 – ಸುವರ್ಣ ದಿನ"**
(ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ನುಡಿಗಳು)

**ಅನು : ಡಾ. ಕೆ.ಎಸ್. ಆಮೂರ**
ದೇವ ಮಹೂರ್ತ 3
ನಾವು ಪವಾಡವೊಂದರಲ್ಲಿ ಜೀವಿಸುತ್ತಿದ್ದೇವೆ, ದೈವೀಕೃಪೆ ಇಲ್ಲದೆ 5
ನಮ್ಮ ಆಳಾತಿಆಳದ ಅಭೀಪ್ಸೆ ಮತ್ತು ಅನಿವಾರ್ಯವಾದ ಗುರಿ 7
ಫೆಬ್ರವರಿ 29, 1956 ರಂದು ಸಂಭವಿಸಿದ್ದೇನು? 8
ಶಕ್ತಿಗಳ ಹೋರಾಟ, ಸಂಘರ್ಷ ಮತ್ತು ಅವುಗಳಿಗೆ ಪರಿಹಾರ 9
ಸದ್ಯದ ಜಗತ್ತು ಹಾಗೂ ಅತಿಮಾನಸ ಜಗತ್ತು 12
**ಅನು : ಶ್ರೀ ವೀರೇಂದ್ರ ಸಿಂಪಿ**
ಹೊಸ ದೈವೀ ಪ್ರಜ್ಞೆಯನ್ನು ಸ್ವೀಕರಿಸುವುದಕ್ಕೆ ನಾವು ಸಿದ್ಧತೆ ಮಾಡಿಕೊಳ್ಳುವುದು ಹೇಗೆ? 15
ಹೊಸ ಸೃಷ್ಟಿಯ ಪ್ರಭಾವದಡಿಯಲ್ಲಿ ಮಾನವತೆಯನ್ನು ಕುರಿತು ಶ್ರೀಮಾತೆಯವರ ದರ್ಶನ 19
**ಅನು : ಶ್ರೀ ಪುರುಷೋತ್ತಮ ಗಲಗಲಿ**
ಶ್ರೀಮಾತೆ : ಭಗವಂತನ ದೈವೀ ಪ್ರಜ್ಞೆ ಹಾಗೂ ದೈವೀ ಶಕ್ತಿ 21
**ಅನು : ಡಾ. ಕೆ.ಎಸ್. ಆಮೂರ**
ಶ್ರೀಮಾತೆಯವರು ದೇಹಧಾರಣೆ ಮಾಡಿದುದರ ಉದ್ದೇಶ 24
ಶ್ರೀಮಾತೆಯವರ ಸಾಮರ್ಥ್ಯಗಳು ಹಾಗೂ ವ್ಯಕ್ತಿವಿಶಿಷ್ಟತೆಗಳು 26
ಅವಿದ್ಯೆ ಮತ್ತು ಮಿಥ್ಯೆ ಎಂದರೇನು? 27
ಶ್ರೀಮಾತೆಯವರ ಸಾಮರ್ಥ್ಯ ಒಂದೇ ವೇಳೆಗೆ ವಿಮೋಚನೆಗೊಳಿಸುವಂತಹದು ಹಾಗೂ ಕ್ರಿಯಾಶಕ್ತಿಯೂ ಆಗಿರುತ್ತದೆ 29
ದೈವೀ ಪ್ರೇಮದ ರಹಸ್ಯ 31
**ವಾರ್ತಾಪತ್ರ** 43

**ಬೆಲೆ : 15/–**

# "ಫೆಬ್ರವರಿ 29 – ಸುವರ್ಣ ದಿನ"

ಫೆಬ್ರವರಿ 29 ಶ್ರೀಮಾತೆಯವರು "ಪೃಥ್ವಿಯ ಮೇಲೆ ಅತಿಮಾನಸದ ಪ್ರಕಟಣೆ" ಎಂದು ಹೆಸರಿಸಿದ ಆಧ್ಯಾತ್ಮಿಕ ಘಟನೆಯನ್ನು ಸ್ಮರಿಸಿಕೊಳ್ಳುವ ದಿನವಾಗಿದೆ. ಪೃಥ್ವಿಯ ಮೇಲಿನ ಆಧ್ಯಾತ್ಮಿಕ ಇತಿಹಾಸದಲ್ಲಿಯ ಈ ಅಸಾಧಾರಣ ಘಟನೆಗಾಗಿ ಶ್ರೀಮಾತೆಯವರು ಹಾಗೂ ಶ್ರೀಅರವಿಂದರು ದಶಕಗಳ ಕಾಲ ಕಾರ್ಯ ಮಾಡಿದರು ಮತ್ತು ಅದು ತೀವ್ರವಾಗಿ ಸಂಭವಿಸಲಿ ಎಂದು ಶ್ರೀ ಅರವಿಂದರು ಯಜ್ಞಕ್ಕೆ ಆಹುತಿ ಕೊಡುವ ರೂಪದಲ್ಲಿ 1950ರಲ್ಲಿ ದೇಹತ್ಯಾಗ ಮಾಡಿದರು.

# ದೇವ ಮುಹೂರ್ತ

ಭಗವಂತ ಮನುಷ್ಯರ ನಡುವೆ ಚಲಿಸುತ್ತಿರುವ,
ಪ್ರಭುವಿನ ಉಸಿರು ನಮ್ಮ ಸತ್ತೆಯ ಜೀವಜಲದಲ್ಲಿ
ಎಲ್ಲೆಡೆಗೂ ವಿಸ್ತಾರವಾಗಿ ಹರಡಿಕೊಳ್ಳುತ್ತಿರುವ
ಕ್ಷಣಗಳಿರುತ್ತವೆ.

ನಿವೃತ್ತಿ ಹೊಂದಿದಂತೆ ಕಾಣುವ.
ಮನುಷ್ಯರು ತಮ್ಮ ಅಹಂಕಾರದ ಬಲದ ಇಲ್ಲವೆ ಅಶಕ್ತತೆಯ
ಆಧಾರದ ಮೇಲೆ ಕಾರ್ಯ ಕೈಕೊಳ್ಳಲು
ಭಗವಂತ ಅವರನ್ನು ಬಿಟ್ಟುಕೊಟ್ಟಿರುವ
ಬೇರೆ ಕ್ಷಣಗಳಿರುತ್ತವೆ.

ಮೊದಲ ರೀತಿಯ ಅವಧಿಗಳಲ್ಲಿ
ಅಲ್ಪ ಪ್ರಯತ್ನವೂ ಕೂಡ
ಮಹತ್ತರ ಪರಿಣಾಮವನ್ನುಂಟು ಮಾಡುವುದು
ಮತ್ತು ಅದೃಷ್ಟವನ್ನು ಬದಲಿಸುವುದು.

ಎರಡನೆಯ ರೀತಿಯ ಅವಧಿಗಳಲ್ಲಿ
ಚಿಕ್ಕ ಪರಿಣಾಮವನ್ನು ಕಂಡುಕೊಳ್ಳುವುದಕ್ಕಾಗಿ
ಬಹಳ ಶ್ರಮಪಡಬೇಕಾದ ಕಾಲದ ಅಂತರಗಳಿರುವವು.

ಎರಡನೆಯ ತರಹದ ಕ್ಷಣಗಳು ಮೊದಲನೆಯ ತರಹದ
ಅವಧಿಗಳನ್ನು ಸಿದ್ಧಗೊಳಿಸಬಹುದು,
ಸ್ವರ್ಗ ತಲುಪುವ ಯಜ್ಞದ ಅಲ್ಪ ಹೊಗೆ
ಭಗವಂತನ ಔದಾರ್ಯದ ಮಳೆಯನ್ನು ಕರೆತರಬಹುದು
ಎಂಬುದು ಸತ್ಯ.

ದೈವೀ ಕ್ಷಣ ಒದಗಿ ಬಂದಾಗ ಮನುಷ್ಯ ಇಲ್ಲವೆ ದೇಶ
ನಿದ್ರಿಸುತ್ತ, ಆ ಕ್ಷಣವನ್ನು ಉಪಯೋಗಿಸುವ ತಯಾರಿ
ಮಾಡಿಕೊಳ್ಳದೆ ಇರುವುದು ದುರದೃಷ್ಟಕರ,
ಏಕೆಂದರೆ ಆ ಕ್ಷಣವನ್ನು ಸ್ವಾಗತಿಸಲು ದೀಪ ಹಚ್ಚಿಡಲಾಗಿಲ್ಲ
ಕರೆಯ ಕೇಳಲು ಕಿವಿಗಳನ್ನು ತೆರೆದಿಡಲಾಗಿಲ್ಲ.



ಬಲವುಳ್ಳವರು, ತಯಾರಿ ಮಾಡಿಕೊಂಡವರು ಆಗಿದ್ದರೂ ಕೂಡ
ಆ ಶಕ್ತಿಯನ್ನು ಹಾಳು ಮಾಡಿದರೆ,
ಆ ಕ್ಷಣವನ್ನು ದುರುಪಯೋಗಪಡಿಸಿಕೊಂಡರೆ
ಅವರಿಗೆ ಮತ್ತೆ, ಮತ್ತೆ ಕೇಡುಂಟಾಗುವುದು,
ತುಂಬಿ ಬಾರದ ಹಾನಿ ಇಲ್ಲವೆ ದೊಡ್ಡ ವಿನಾಶ ಒದಗುವುದು.

ದೇವ ಮಹೂರ್ತದಲ್ಲಿ
ಸ್ವ–ವಂಚನೆ, ಮಿಥ್ಯಾಚರಣೆ ಹಾಗೂ ವ್ಯರ್ಥ ಸ್ವ–ಶ್ಲಾಘನೆಗಳು
ಕಳೆದು ಹೋಗುವಂತೆ ನಿನ್ನ ಆತ್ಮವನ್ನು ಶುದ್ಧಗೊಳಿಸು,
ಅದರಿಂದಾಗಿ ನೀನು ನೇರವಾಗಿ ನಿನ್ನ ಆತ್ಮದೆಡೆಗೆ
ನೋಡುವಂತಾಗಬಹುದು ಮತ್ತು ನಿನ್ನನ್ನು
ಆಹ್ವಾನಿಸುವುದನ್ನು ಕೇಳುವಂತಾಗಬಹುದು.

ಪ್ರಭುವಿನ ದೃಷ್ಟಿ ಹಾಗೂ ಆದರ್ಶದ ಪ್ರಕಾಶ
ಇವುಗಳ ವಿರುದ್ಧ ನಿನ್ನ ರಕ್ಷಣೆಯಾಗಿದ್ದ ಪ್ರಕೃತಿಯ ಕಾಪಟ್ಯ
ಈಗ ನಿನ್ನ ಕವಚದಲ್ಲಿ ಛಿದ್ರವನ್ನುಂಟು ಮಾಡಿ
ಏಟಿಗೆ ಆಹ್ವಾನ ನೀಡುವುದು.
ಸದ್ಯದ ಕ್ಷಣದಲ್ಲಿ ಗೆದ್ದುಕೊಂಡಿದ್ದೆಯಾದರೆ
ಅಷ್ಟರ ಮಟ್ಟಿಗೆ ಇನ್ನೂ ಕೆಟ್ಟದಾಗುವುದು,
ಕಾರಣ, ನಂತರ ನಿನ್ನ ವಿಜಯೋತ್ಸವದ ಮಧ್ಯೆ
ಏಟು ಬಂದು, ನಿನ್ನನ್ನು ಕೆಳಗೆ ಕೆಡವಿ ಹಾಕುವುದು.

ಆದರೆ, ಶುದ್ಧನಾಗಿರುವ ನೀನು ಎಲ್ಲ ಭಯವನ್ನು ತೊರೆ,
ಕಾರಣ, ಅಗ್ನಿ, ಸುಂಟರಗಾಳಿ, ಚಂಡಮಾರುತ ಮತ್ತು
ದೇವನ ಕ್ರೋಧದ ದ್ರಾಕ್ಷಿಗಾಣದ ತುಳಿತ ಇವೆಲ್ಲವುಗಳಂತೆ
ಆ ಗಳಿಗೆ ಬಹಳಷ್ಟು ಸಲ ಭಯಾನಕವಾಗಿರುವುದು;

ಆದರೆ ಉದ್ದೇಶದ ಸತ್ಯದ ಆಧಾರದ ಮೇಲೆ
ಅದರಲ್ಲಿ ಎದ್ದು ನಿಲ್ಲಬಲ್ಲವನು ಎದ್ದು ನಿಲ್ಲುವನು,
ಕೆಳಗೆ ಬಿದ್ದರೂ ಮತ್ತೆ ಮೇಲಕ್ಕೇಳುವನು,
ಗಾಳಿಯ ರೆಕ್ಕೆಗಳ ಮೇಲೆ ಅವನು ಸಾಗಿ ಹೋದಂತೆ
ಕಂಡುಬಂದಾಗ್ಯೂ ಮರಳಿ ಬರುವನು.

ಸಾಂಸಾರಿಕ ಲೋಕವ್ಯವಹಾರ ಕುಶಲತೆ ನಿನ್ನ ಕಿವಿಗಳಲ್ಲಿ
ಅತಿ ಹತ್ತಿರದಿಂದ ಪಿಸುಗುಟ್ಟದಿರಲಿ, ಕಾರಣ
ಅದು ಅನಿರೀಕ್ಷಿತ, ಲೆಕ್ಕಾಚಾರಕ್ಕೆ ಮತ್ತು
ಅಳತೆಗೆ ಸಿಗದ ಮುಹೂರ್ತ.

ದೈವೀ ಉಸಿರಿನ ಸಾಮರ್ಥ್ಯವನು
ನಿನ್ನ ಕ್ಷುದ್ರ ಉಪಕರಣಗಳಿಂದ ಅಳೆಯಬೇಡ,
ಆದರೆ ವಿಶ್ವಾಸವಿರಿಸಿ, ಮುಂದೆ ನಡೆ.

ಎಲ್ಲದಕ್ಕಿಂತಲೂ ಹೆಚ್ಚಾಗಿ ಅಹಂಕಾರದ ಗದ್ದಲದಿಂದ
ನಿನ್ನ ಆತ್ಮವನ್ನು, ಕ್ಷಣಮಾತ್ರಕ್ಕಾದರೂ ಆಗಲಿ, ದೂರವಿರಿಸು.
ಆಗ ರಾತ್ರಿಯಲ್ಲಿ ಅಗ್ನಿಯೊಂದು ನಿನ್ನ ಮುಂದೆ ಹೆಜ್ಜೆ ಹಾಕುವುದು,
ಬಿರುಗಾಳಿ ನಿನಗೆ ಸಹಾಯಕವಾಗುವುದು,
ಗೆದ್ದುಕೊಳ್ಳಬೇಕಾಗಿದ್ದ ಶ್ರೇಷ್ಠತೆಯ ಅತ್ಯುನ್ನತ
ಎತ್ತರದ ಮೇಲೆ ನಿನ್ನ ಧ್ವಜ ಹಾರಾಡುವುದು.

**– ಶ್ರೀ ಅರವಿಂದರು**

## ನಾವು ಪವಾಡವೊಂದರಲ್ಲಿ ಜೀವಿಸುತ್ತಿದ್ದೇವೆ, ದೈವೀಕೃಪೆ ಇಲ್ಲಿದೆ

(7/413–14) ನಿಮಗೆ ಈ ಅನುಭವ ಆಗಿದೆಯೋ ಇಲ್ಲವೋ ನನಗೆ ತಿಳಿಯದು, ಮಾನವ ಕುಲ ಕುರಿತು ಮತ್ತು ಮಾನವತೆಗೆ ಸಹಾಯ ಮಾಡಲು ಬಂದವರನ್ನು ಕುರಿತು – ನಾನು ಈ ವಿಷಯವನ್ನು ಬೇರೆ ದೇಶಗಳಲ್ಲಿಗಿಂತ ಭಾರತದಲ್ಲಿ ಹೆಚ್ಚಾಗಿ ಕೇಳಿದ್ದೇನೆ – ನನಗನಿಸಿದ್ದೇನೆಂದರೆ ಆ ಕತೆಗಳಲ್ಲಿ ಮೇಲಿನಿಂದ ಮಧ್ಯಸ್ಥಿಕೆ ಇಳಿದು ಬಂದದ್ದರ ಪ್ರಸ್ತಾಪವಿದೆ, ಅಂತಹ ಅವಕಾಶ ಅಲ್ಲಿತ್ತು, ಅದ್ಭುತ ದೈವೀ ಕೃಪೆ-ಯಂತಹದು ಇದ್ದಿತು.

ಹಾಗಾಗಿ ಮನುಷ್ಯ ಚಿಕ್ಕವನಿದ್ದಾಗ ಆ ಕತೆಗಳನ್ನು ಓದಿದರೆ "ಓ ಅಂತಹ ಕಾಲದಲ್ಲಿ ಜೀವಿಸಿರುವುದನ್ನು ನಾನು ಎಷ್ಟೊಂದು ಇಷ್ಟಪಡುತ್ತೇನೆ" ಎಂದು ಹೇಳುತ್ತಾನೆ. ಇಂತಹ ಅನುಭವ ನಿಮಗಾಗಿದೆಯೋ ಇಲ್ಲವೋ ನನಗೆ ತಿಳಿಯದು.

ಅಂತಹ ಅನುಭವ ಪಡೆದಿದ್ದ ಜನರ ಪರಿಚಯ ನನಗಿತ್ತು. ಹಾಗಿದ್ದಾಗ ಮನುಷ್ಯ ಅಂತಹದನ್ನು ಕೇಳುತ್ತಾನೆ; "ಸರಿ, ಇಂತಹ ಅವಕಾಶ ನಿಮಗೆ ದೊರಕಿತ್ತು ಎಂದು ಕಲ್ಪಿಸಿಕೊಳ್ಳಲು ಪ್ರಯತ್ನಿಸೋಣ, ಅದಕ್ಕೆ ನಿಮ್ಮ ಪ್ರತಿಕ್ರಿಯೆ ಎಂತಹ-ದಿರುತ್ತಿತ್ತು?" ಕೆಲವೊಮ್ಮೆ ಮನುಷ್ಯ ಅದರ ಬಗ್ಗೆ ಗ್ರಹಿಕೆ ತಂದುಕೊಳ್ಳುತ್ತಾನೆ; ಒಮ್ಮೆಲೆ ಸ್ವರ್ಗ ತೆರೆದುಕೊಂಡಿರುವ ಹಾಗೆ ತೋರಿಬರುತ್ತದೆ ಮತ್ತು ಮೊದಲು ಇಲ್ಲದೇ ಇದ್ದ ಏನೋ ಒಂದು ಬಂದಿದೆ ಎಂದು ಅವನಿಗೆ ಅನಿಸುತ್ತದೆ. ಅದೆಷ್ಟು ಕಾಲದವರೆಗೆ ಎಂದು ಹೇಳಲಾಗದು, ಆದರೆ ಏನೇ ಆಗಲಿ ಅದು ಪೃಥ್ವಿಯ ಹಾಗೂ ಮಾನವ ಜೀವನದಲ್ಲಿ ಅಸಾಧಾರಣ ಕ್ಷಣಗಳಲ್ಲೊಂದು, ಆಗ ವಿಷಯ-ಗಳು ಸಾಮಾನ್ಯ ರೀತಿಯವಾಗಿರುವಂತೆ ಅಂದರೆ ಮಬ್ಬಾಗಿ, ನಿರ್ಜೀವವಾಗಿ ಇರುವುದಿಲ್ಲ. ಹಾಗಾಗಿ ಮನುಷ್ಯನಿಗೆ ಪವಾಡವೊಂದರಲ್ಲಿ ಜೀವಿಸುತ್ತಿರುವ ಭಾವನೆ ಬರುತ್ತದೆ.



ಮನುಷ್ಯ ಅದನ್ನು ಉಳಿಸಿಕೊಳ್ಳಬಲ್ಲನಾದರೆ ಎಲ್ಲವೂ ಸುಸೂತ್ರವಾಗುತ್ತದೆ. ದುರ್ದೈವದ ವಿಷಯವೆಂದರೆ ಮನುಷ್ಯ ಅದನ್ನು ಬೇಗ ಮರೆತುಬಿಡುತ್ತಾನೆ.

ಮನುಷ್ಯನಿಗೆ ಆ ಅನುಭವ ಒಂದು ಸಲ ಬಂದಿತ್ತಾದರೆ, ಅದಾಗಲೇ ಅದು ಏನೋ ಒಂದಾಗಿರುತ್ತದೆ, ದ್ವಾರವನ್ನು ತೆರೆದಿರಿಸಲಾಗಿರುತ್ತದೆ. ಒಮ್ಮೆಲೆ ಮನುಷ್ಯ-ನಿಗೆ ಅದರ ಭಾವನೆ ಬಂದಿರುತ್ತದೆ. ಹೌದು ಅವನು ಅದನ್ನು ಭಾವನೆಗೆ ತಂದು-ಕೊಂಡಿರುತ್ತಾನೆ, ಅದು ಏನೋ ಒಂದಾಗಿರುತ್ತದೆ, ಅದು ಅನಂತ ದೈವೀಕೃಪೆ, ಅತ್ಯದ್ಭುತವಾದದ್ದು. ಒಂದು ಅಥವಾ ಎರಡು ಶತಮಾನಗಳ ಹಿಂದೆ ಜೀವಿಸಿದ್ದ ಎಲ್ಲರೂ ಅದರ ಬಗ್ಗೆ ಭರವಸೆ ಹೊಂದಿದ್ದರು, ಅದಕ್ಕಾಗಿ ಕಾದುಕೊಂಡಿದ್ದರು, ಅವರಿಗೆ ಒಂದೇ ಅವಕಾಶವಿತ್ತು, ಅದು ಹೆಚ್ಚು ಒಳ್ಳೆಯ ಪರಿಸ್ಥಿತಿಗಳಲ್ಲಿ ಹೊಸ ಜೀವನವನ್ನು ಮತ್ತೆ ನಡೆಸುವುದಾಗಿತ್ತು.

ಆದರೆ ನಮಗೆ ಈಗ ಅಂತಹ ಪರಿಸ್ಥಿತಿಗಳಿವೆ, ಅವು ಇಲ್ಲಿವೆ, ದೈವೀಕೃಪೆ ಇಲ್ಲಿದೆ.

ಮನುಷ್ಯ ಅದರ ಅನುಭವ ಪಡೆಯಲು ಶಕ್ತನಾದರೆ – ಕೇವಲ ಅದರ ಬಗೆಗಿನ ವಿಚಾರವನ್ನಲ್ಲ – ಆ ವಿಷಯದ ಅನುಭವ ಪಡೆಯಬಲ್ಲನಾದರೆ ಮತ್ತು ನಂತರ ಅದನ್ನು ಉಳಿಸಿಕೊಳ್ಳಬಲ್ಲನಾದರೆ ಆಗ ಎಲ್ಲವೂ ಸುಲಭವಾಗುವುದು. ದುರ್ದೈವದ ವಿಷಯವೆಂದರೆ ಅವನು ಅದನ್ನು ಬೇಗ ಮರೆತುಬಿಡುತ್ತಾನೆ.

## ಫೆಬ್ರವರಿ 29 – ಸುವರ್ಣ ದಿನ

# ನಮ್ಮ ಆಳಾತಿಆಳದ ಅಭೀಪ್ಸೆ ಮತ್ತು ಅನಿವಾರ್ಯವಾದ ಗುರಿ

### ಹೊಂಬಣ್ಣದ ದಿವ್ಯ ಬೆಳಕು

(5/134)

ನಿನ್ನ ಹೊಂಬಣ್ಣದ ದಿವ್ಯ ಬೆಳಕು ಬಂದಿಳಿಯಿತು ನನ್ನ ಮಿದುಳಿನಲಿ
ಮನದ ಸಂದಿಗ್ಧತಾಣಗಳಿಗೆ ಆಯಿತು ಸೂರ್ಯಸ್ಪರ್ಶ
ವಿವೇಚನೆಯ ರಹಸ್ಯಸ್ತರಕೆ ಕಾಂತಿಯ ಪ್ರತಿವಚನ,
ಸ್ಥಿರ ಜ್ಞಾನೋದಯ ಮತ್ತು ಉಜ್ವಲ ಬೆಳಕು.

ನಿನ್ನ ಹೊಂಬಣ್ಣದ ದಿವ್ಯ ಬೆಳಕು ಬಂದಿಳಿಯಿತು ನನ್ನ ಗಂಟಲಲ್ಲಿ
ನನ್ನ ಮಾತೆಲ್ಲ ಈಗ ದಿವ್ಯ ಸ್ವರವಾಗಿಹುದು
ನಿನಗೆ ನಾನರ್ಪಿಸುವ ಧನ್ಯವಾದದ ಹಾಡೇ ನನ್ನ ಏಕೈಕ ಸ್ವರ
ನನ್ನ ಶಬ್ದಗಳು ಕುಡಿದಿಹವು ಅಮರನ ಮದಿರೆಯನು.

ನಿನ್ನ ಹೊಂಬಣ್ಣದ ದಿವ್ಯ ಬೆಳಕು ಬಂದಿಳಿಯಿತು ನನ್ನ ಹೃದಯದಲಿ
ನಿನ್ನ ನಿತ್ಯತೆಯಿಂದ ನನ್ನ ಜೀವನವನು ದಂಡಿಸುತ;
ಅದೀಗ ನಿನ್ನ ದೇಗುಲವೆ ಆಗಿಹದು, ಅಲ್ಲಿ ನೀನೇ ಇರುವೆ
ಅದರ ಭಾವೋದ್ರೇಕಗಳೆಲ್ಲ ನಿನ್ನೆಡೆಗೇ ಮುಖ ಮಾಡಿಹವು.

ನಿನ್ನ ಹೊಂಬಣ್ಣದ ಬೆಳಕು ಬಂದಿಳಿಯಿತು ನನ್ನ ಪಾದಗಳಲಿ
ನಿನ್ನ ಲೀಲಾಕ್ಷೇತ್ರ ಮತ್ತು ನಿನ್ನಾಸನವೇ ಈಗ ನನ್ನ ಭೂಮಿ.

**– ಶ್ರೀ ಅರವಿಂದರು**

(12/279) "ದೇವ ಮುಹೂರ್ತ" ಎಂದು ಕರೆಯಲಾಗುವ ಸಮಯದಲ್ಲಿ ನಾವಿದ್ದೇವೆ, ಈಗ ಹಳೆಯ ಆಧಾರಗಳನ್ನು ಅಲುಗಾಡಿಸಲಾಗುತ್ತದೆ ಮತ್ತು ಹೆಚ್ಚಿನ ಗೊಂದಲ ಕಾಣಿಸಿಕೊಳ್ಳುತ್ತದೆ. ಆದರೆ ನೆಗೆತ ಮಾಡಿ ಮುಂದೆ ಸಾಗಬೇಕೆನ್ನುವವರಿಗೆ ಪ್ರಗತಿಗಾಗಿರುವ ಸಾಧ್ಯತೆ ಅಸಾಧಾರಣವಾಗಿದೆ.

ಅದರ ಪ್ರಯೋಜನ ಪಡೆಯಬೇಕೆಂಬುವವರಲ್ಲಿ ನೀವೂ ಒಬ್ಬರಾಗುವಿರಲ್ಲವೆ?

**– ಶ್ರೀಮಾತೆ**



## ಫೆಬ್ರವರಿ 29, 1956 ರಂದು ಸಂಭವಿಸಿದ್ದೇನು?

(15/188) ಬುಧವಾರದ ಸಾಮೂಹಿಕ ಧ್ಯಾನ ನಡೆದ ಸಮಯ.

ಈ ದಿನ ಸಾಯಂಕಾಲ ದೈವೀ ಸಾನ್ನಿಧ್ಯವು ಮೂರ್ತರೂಪದಲ್ಲಿ ಮತ್ತು ಭೌತಿಕ ರೂಪದಲ್ಲಿ ನಿಮ್ಮ ಮಧ್ಯೆ ಒದಗಿ ಬಂದಿತ್ತು. ವಿಶ್ವಕ್ಕಿಂತ ವಿರಾಟದ್ದೆನಿಸುವ ಸ್ವರ್ಣರೂಪ ನನ್ನದಾಗಿತ್ತು. ಭಗವಂತನನ್ನೂ, ಜಗತ್ತನ್ನೂ ಬೇರ್ಪಡಿಸುವ ಬೃಹತ್ ಹಿರಣ್ಮಯ ದ್ವಾರದೆದುರಿಗೆ ಮುಖ ಮಾಡಿ ನಿಂತಿದ್ದೆ.

ಆ ದ್ವಾರವನ್ನು ನಿರೀಕ್ಷಿಸುತ್ತಿದ್ದಂತೆ ದೈವೀ ಪ್ರಜ್ಞೆಯ ಒಂದು ಚಲನೆಯಲ್ಲಿ ನಾನು ಅದರ ರಹಸ್ಯವನ್ನರಿತೆ, 'ಮುಹೂರ್ತ ಸನ್ನಿಹಿತವಾಗಿದೆ' ಎಂದು ಸಂಕಲ್ಪಿಸಿದೆ. ಆಗ ನನ್ನ ಎರಡೂ ಕೈಗಳಿಂದ ಬಲಾಢ್ಯವಾದ ಸುವರ್ಣ ಸುತ್ತಿಗೆಯನ್ನು ಕೈಗೆತ್ತಿಕೊಂಡು ಒಂದು ಏಟುಕೊಟ್ಟೆ. ಆ ಮಹಾದ್ವಾರಕ್ಕೆ ಒಂದೇ ಒಂದು ಏಟುಕೊಟ್ಟೆ. ದ್ವಾರವು ಒಡೆದು ಚೂರು ಚೂರಾಯಿತು.

ನಂತರ ಅತಿಮಾನಸ ದೈವೀ ಪ್ರಕಾಶ, ಶಕ್ತಿ ಮತ್ತು ಪ್ರಜ್ಞೆ ಧಾರಾಕಾರವಾಗಿ ಈ ಪೃಥ್ವಿಯ ಮೇಲೆ ರಭಸದಿಂದ ನುಗ್ಗಿ ಬಂದವು. **– ಶ್ರೀಮಾತೆ**

*

(9/150) ಸಂಭವಿಸಿದ್ದು ನಿಜವಾಗಿ ಹೊಸ ಘಟನೆ, ಹೊಸ ಜಗತ್ತೊಂದು ಜನ್ಮ ತಾಳಿದೆ, ಅದು ಪರಿವರ್ತನೆಗೊಳಪಡುತ್ತಿರುವ ಹಳೆಯ ಜಗತ್ತಲ್ಲ. ನಿಜವಾಗಿ ಹೊಸ ಜಗತ್ತೊಂದು ಜನ್ಮ ತಾಳಿದೆ. ಹಳೆಯ ಹಾಗೂ ಹೊಸ ಜಗತ್ತುಗಳು ತಳಕು ಹಾಕಿಕೊಂಡಿರುವ ಸಂಕ್ರಮಣದ ಸ್ಥಿತಿಯಲ್ಲಿದ್ದಾಗಿನ ಅವಧಿಯ ಮಧ್ಯೆ ನಾವಿದ್ದೇವೆ – ಹಳೆಯ ಜಗತ್ತು ಇನ್ನೂ ಸರ್ವಸಮರ್ಥವಾಗಿ ಪಟ್ಟುಹಿಡಿದು ಉಳಿದುಕೊಂಡಿದೆ ಮತ್ತು ಸಾಮಾನ್ಯ ಪ್ರಜ್ಞೆಯ ಮೇಲೆ ತನ್ನ ಪ್ರಾಬಲ್ಯವನ್ನು ಮೆರೆಸುತ್ತಿದೆ, ಆದರೆ ಅಲ್ಲಿ ಹೊಸ ಜಗತ್ತು ಶಾಂತ ರೀತಿಯಲ್ಲಿ ಒಳಗೆ ನುಸುಳುತ್ತಿದೆ, ಇನ್ನೂ ಎಷ್ಟೊಂದು ವಿನಮ್ರತೆಯಿಂದ, ದೃಷ್ಟಿಗೋಚರವಾಗದಂತೆ ಬರುತ್ತಿದೆಯೆಂದರೆ ಸದ್ಯದ ಸಮಯದಲ್ಲಿ ಬಾಹ್ಯದಲ್ಲಿ ಯಾವುದನ್ನೂ ಅದು ಕ್ಷೋಭೆಗೊಳಪಡಿಸುವುದಿಲ್ಲ, ಮತ್ತು ಬಹಳ ಜನರ ಪ್ರಜ್ಞೆಯಲ್ಲಿ ಅದು ಇನ್ನೂ ಗ್ರಹಿಕೆಗೆ ಬರದಂತಿದೆ. ಆದಾಗ್ಯೂ ಅದು ತನ್ನನ್ನು ದೃಷ್ಟಿಗೋಚರವಾಗುವಂತೆ ಮಾಡಿ ದೃಢೀಕರಣಗೊಳಿಸಲು ಶಕ್ತವಾಗುವವರೆಗೆ ಕಾರ್ಯ ನಿರತವಾಗಿರುತ್ತದೆ ಮತ್ತು ಬೆಳೆಯುತ್ತಿರುತ್ತದೆ.

**– ಶ್ರೀಮಾತೆ**

*

## ಶಕ್ತಿಗಳ ಹೋರಾಟ, ಸಂಘರ್ಷ ಮತ್ತು ಅವುಗಳಿಗೆ ಪರಿಹಾರ

(9/296–97, 74–75) ಮಾನವತೆ ಒಂದು ಬಗೆಯ ಸರ್ವಸಾಮಾನ್ಯ ಉದ್ವಿಗ್ನತೆಯ ಸ್ಥಿತಿಯ ಹಂತವನ್ನು ತಲುಪಿರುವುದು ಸ್ಪಷ್ಟವಾಗಿದೆ – ಆ ಉದ್ವಿಗ್ನತೆ ಪ್ರಯತ್ನದಲ್ಲಿ, ಕಾರ್ಯದಲ್ಲಿ, ದೈನಂದಿನ ಜೀವನದಲ್ಲಿಯೂ ಕೂಡ ಎಷ್ಟೊಂದು ಅತಿಯಾದ ಚಟುವಟಿಕೆ, ಎಷ್ಟೊಂದು ವಿಸ್ತರಿಸಿಕೊಂಡ ಮನಸ್ಸಿನ ಗಾಬರಿ ಇವುಗಳೊಂದಿಗೆ ಕೂಡಿಕೊಂಡಿದೆಯೆಂದರೆ ಮಾನವ ಕುಲ ಒಂದು ಹಂತವನ್ನು ತಲುಪಿದಂತಿದೆ, ಅಲ್ಲಿ ಅದು ವಿರೋಧವನ್ನು ಭಗ್ನಗೊಳಿಸಿ ಹೊಸ ಪ್ರಜ್ಞೆಯಲ್ಲಿ ಹೊರಹೊಮ್ಮಬೇಕು ಇಲ್ಲವೆ ಅಂಧಕಾರ ಹಾಗೂ ಜಡತೆ ಇರುವ ಕಂದರದಲ್ಲಿ ಪತನಗೊಳ್ಳಬೇಕು.

ಈ ಉದ್ವಿಗ್ನತೆ ಎಷ್ಟೊಂದು ಸಂಪೂರ್ಣವಾಗಿದೆಯೆಂದರೆ ಮತ್ತು ವಿಸ್ತರಿಸಿಕೊಂಡಿದೆಯೆಂದರೆ ಸ್ಪಷ್ಟವಾಗಿ ಏನಾದರೊಂದು ಭಗ್ನಗೊಳ್ಳಬೇಕು, ಅದು ಹಾಗೆಯೇ ಮುಂದುವರಿದುಕೊಂಡು ಹೋಗುವುದು ಸಾಧ್ಯವಿಲ್ಲ. ಅದು ಶಕ್ತಿಯ, ಪ್ರಜ್ಞೆಯ ಹಾಗೂ ಸಾಮರ್ಥ್ಯದ ಹೊಸ ತತ್ವವನ್ನು ಭೌತಿಕದೊಳಗೆ ಸುರಿಯುತ್ತಿರುವುದರ ಕುರುಹೆಂದು ನಾವು ಭಾವಿಸಬಹುದು, ಅದು ತನ್ನ ಒತ್ತಡದಿಂದ ಈ ತೀಕ್ಷ್ಣ ಸ್ಥಿತಿಯನ್ನು ಉತ್ಪಾದಿಸುತ್ತದೆ. ಪ್ರಕೃತಿ ಬಿರುಸಿನ ಬದಲಾವಣೆಯನ್ನು ತರಲು ಬಯಸಿದಾಗ ಬಾಹ್ಯದಲ್ಲಿ ಅದರ ಹಳೆಯ ವಿಧಾನಗಳನ್ನು ನಾವು ನಿರೀಕ್ಷಿಸಬಹುದು, ಆದರೆ ಅಲ್ಲೊಂದು ಹೊಸ ಗುಣಧರ್ಮವಿದೆ. ಅದು ಸಹಜವಾಗಿ ಗಣ್ಯರ ಗುಂಪೊಂದಕ್ಕೆ ಮಾತ್ರ ಗೋಚರವಾಗುತ್ತದೆ. ಆದರೆ ಈ ಗುಂಪು ಕೂಡ ಬಹುಮಟ್ಟಿಗೆ ವಿಸ್ತರಿಸಿಕೊಂಡಿದೆ. ಅದು ಒಂದು ನಿರ್ದಿಷ್ಟ ಹಂತಕ್ಕೆ, ಜಗತ್ತಿನ ಒಂದು ಸ್ಥಳಕ್ಕೆ ಸೀಮಿತವಾಗಿರುವುದಿಲ್ಲ, ಅದರ ಗುರುತುಗಳನ್ನು ಎಲ್ಲ ದೇಶಗಳಲ್ಲಿ, ಜಗತ್ತಿನ ಎಲ್ಲೆಡೆಗಳಲ್ಲಿ ನಾವು ಕಂಡುಕೊಳ್ಳುತ್ತೇವೆ. ಅದು ಹೊಸ, ಉಚ್ಚತರ, ಪ್ರಗತಿಪರ ಪರಿಹಾರವನ್ನು ಕಂಡುಕೊಳ್ಳುವ ಸಂಕಲ್ಪವಾಗಿದೆ, ಹೆಚ್ಚು ವಿಸ್ತಾರವಾದ, ವ್ಯಾಪಕವಾದ ಪರಿಪೂರ್ಣತೆಯತ್ತ ಮೇಲೇರಿ ಹೋಗುವ ಪ್ರಯತ್ನವಾಗಿದೆ.

ಹೆಚ್ಚು ಸಾರ್ವತ್ರಿಕ ಸ್ವಭಾವವಿರುವ, ಹೆಚ್ಚು ವಿಸ್ತಾರವಾದ, ಬಹುಶಃ ಹೆಚ್ಚು ಸಾಮೂಹಿಕ ರೂಪದ ಕೆಲವೊಂದು ವಿಚಾರಗಳು ನಿರ್ದಿಷ್ಟ ಫಲಿತಾಂಶ ನೀಡುತ್ತಿವೆ ಮತ್ತು ಜಗತ್ತಿನ ಮೇಲೆ ಕಾರ್ಯ ಮಾಡುತ್ತಿವೆ. ಜೊತೆಯಾಗಿ ಸಾಗುವ ಎರಡು ವಿಷಯಗಳಿವೆ: ಹೆಚ್ಚು ಭವ್ಯ, ಹೆಚ್ಚು ಇಡಿಯಾದ ರೀತಿಯ ವಿನಾಶ, ಹಿಂದೆಂದೂ



ಕಂಡಿರದ, ಹೆಚ್ಚಿನ ಪ್ರಮಾಣದಲ್ಲಾಗುವ ಅನಾಹುತದ ಸಾಧ್ಯತೆಯನ್ನುಂಟು ಮಾಡುವ ಅಜಾಗರೂಕ ನಿರ್ಮಾಣಶೀಲತೆ ಇವು ಒಂದೆಡೆಗಿದ್ದರೆ ಇನ್ನೊಂದೆಡೆಗೆ ಅದೇ ಸಮಯದಲ್ಲಿ ಉಚ್ಚತರ, ಹೆಚ್ಚು ವ್ಯಾಪಕ ವಿಚಾರಗಳು ಹಾಗೂ ಕ್ರಿಯೆಗಳಿರುತ್ತವೆ, ಅವುಗಳಿಗೆ ಕಿವಿಗೊಟ್ಟಾಗ ಅವು ಹೆಚ್ಚು ವಿಸ್ತಾರವಾದ, ಭವ್ಯವಾದ, ಹೆಚ್ಚು ಸಂಪೂರ್ಣವಾದ ಮೊದಲಿಗಿಂತ ಹೆಚ್ಚು ಪರಿಪೂರ್ಣವಾದ ಉಪಾಯವನ್ನು ತರುತ್ತವೆ.

ಹೆಚ್ಚು ಪರಿಪೂರ್ಣ ಹಾಗೂ ದೈವೀ ಸಿದ್ಧಿಯತ್ತ ಆರೋಹಣ ಮಾಡುತ್ತಿರುವ ಉತ್ಕ್ರಾಂತಿಯ ರಚನಾತ್ಮಕ ಶಕ್ತಿಗಳು ಹಾಗೂ ಎಲ್ಲ ನಿಯಂತ್ರಣ ಮೀರಿದ, ವಿನಾಶಕಾರಿ, ಹೆಚ್ಚಿನ ವಿನಾಶವನ್ನುಂಟು ಮಾಡುವ ಹುಚ್ಚು ಶಕ್ತಿಗಳು ಇವುಗಳ ನಡುವಿನ ಈ ಹೋರಾಟ, ಈ ಸಂಘರ್ಷ ಹೆಚ್ಚು ಸ್ಪಷ್ಟವಾಗುತ್ತಿದೆ, ಗುರುತಿಸುವ ಹಾಗಿದೆ ಹಾಗೂ ಗೋಚರವಾಗುತ್ತಿದೆ. ಅದು ಈ ಶಕ್ತಿಗಳ ನಡುವೆ, ಯಾವುದು ತನ್ನ ಗುರಿಯನ್ನು ಮೊದಲು ತಲುಪುವುದು ಎಂಬುದನ್ನು ನಿರ್ಧರಿಸಲು, ನಡೆಯುತ್ತಿರುವ ಪಂದ್ಯದ ಹಾಗಿದೆ. ಎಲ್ಲ ವಿರೋಧಿ ಶಕ್ತಿಗಳು ಹಾಗೂ ಪ್ರಾಣಿಕ ಲೋಕದ ಶಕ್ತಿಗಳು ಪೃಥ್ವಿಯ ಮೇಲೆ ಅದನ್ನು ತಮ್ಮ ಕ್ಷೇತ್ರವನ್ನಾಗಿ ಮಾಡಿಕೊಳ್ಳಲು ಕೆಳಗಿಳಿದು ಬಂದಿವೆಯೇನೋ ಎನ್ನುವ ಹಾಗಿದೆ, ಮತ್ತು ಅದೇ ವೇಳೆಗೆ ಹೊಸ, ಉಚ್ಚತರ, ಸಾಮರ್ಥ್ಯವಿರುವ ಆಧ್ಯಾತ್ಮಿಕ ಶಕ್ತಿಯೂ ಕೂಡ ಪೃಥ್ವಿಯ ಮೇಲೆ ಹೊಸ ಜೀವನವನ್ನು ತರಲು ಕೆಳಗಿಳಿದು ಬಂದಿದೆ. ಇದು ಹೋರಾಟ ಹೆಚ್ಚು ತೀಕ್ಷ್ಣವಾಗುವಂತೆ, ಹಿಂಸಾತ್ಮಕವಾಗುವಂತೆ ಮತ್ತು ಗೋಚರವಾಗುವಂತೆ ಮಾಡುತ್ತದೆ ಮತ್ತು ಹಾಗೆಯೇ ಅದು ಹೆಚ್ಚು ನಿರ್ಧಾರಕವಾದದ್ದು ಎಂದು ಕೂಡ ತೋರಿಬರುತ್ತದೆ. ಮತ್ತು ಆ ಕಾರಣದಿಂದಾಗಿ ನಾವು ಪರಿಹಾರವನ್ನು ಬೇಗ ಕಂಡುಕೊಳ್ಳುವ ಭರವಸೆ ಹೊಂದಿರಬಹುದಾಗಿದೆ.

ಜಗತ್ತಿನ ಇತಿಹಾಸದಲ್ಲಿ ಏನೋ ಒಂದು ಸಂಭವಿಸಿದೆ, ಅದರಿಂದಾಗಿ ಮಾನವತೆಯಲ್ಲಿ ಆಯ್ದ ಕೆಲವರು, ಚಿಕ್ಕ ಸಂಖ್ಯೆಯಲ್ಲಿರುವ ಸತ್ತೆಗಳು ಬಹುಶಃ ಚೊಕ್ಕ ಬಂಗಾರವಾಗುವ ರೀತಿಯಲ್ಲಿ ಪರಿವರ್ತನೆಗೊಳ್ಳಲು ಸಿದ್ಧರಾಗಿದ್ದಾರೆ ಮತ್ತು ಅವರು ಬಲವನ್ನು ಹಿಂಸೆಯಿಲ್ಲದೆ, ಕ್ರೌರ್ಯವನ್ನು ವಿನಾಶಮಾಡದೆ, ಧೈರ್ಯವನ್ನು ಅನಾಹುತವನ್ನುಂಟು ಮಾಡದೆ ಪ್ರಕಟಗೊಳಿಸಲು ಶಕ್ತರಾಗುತ್ತಾರೆ ಎಂದು ಸಂಭವಿಸಿದ ಆ ಘಟನೆ ನಾವು ಭರವಸೆ ತಾಳಲು ಅನುವು ಮಾಡಿಕೊಡುತ್ತದೆ.

"ಮನುಷ್ಯ ಆಧ್ಯಾತ್ಮೀಕರಣಗೊಳ್ಳಲು ಒಪ್ಪಿಗೆ ನೀಡಿದರೆ ಪರಿಹಾರ ಸಾಧ್ಯ" ಎಂದು ಶ್ರೀ ಅರವಿಂದರು ಉತ್ತರ ನೀಡಿದ್ದಾರೆ. ವ್ಯಕ್ತಿ ಆಧ್ಯಾತ್ಮೀಕರಣಗೊಳ್ಳಲು ಒಪ್ಪಿಗೆ ನೀಡಿದಾಗ ಮಾತ್ರ ಪರಿಹಾರ ಸಾಧ್ಯ.*

ಮನುಷ್ಯನಲ್ಲಿರುವ ಏನೋ ಒಂದು ಅದನ್ನು ಬೇಡುತ್ತದೆ, ಅಭೀಪ್ಸೆಪಡುತ್ತದೆ, ಉಳಿದದ್ದೆಲ್ಲ ತಿರಸ್ಕರಿಸುತ್ತದೆ, ತಾನಿರುವ ರೀತಿಯಲ್ಲಿ ಮುಂದುವರಿಯಲು ಬಯಸುತ್ತದೆ. ಅದು ಮಿಶ್ರಣಕ್ಕೊಳಗಾದ ಅದಿರಿನ ಹಾಗಿದೆ, ಅದನ್ನು ಕುಲುಮೆ–ಯಲ್ಲಿ ಹಾಕಬೇಕಾಗಿದೆ.

ಸದ್ಯದ ಕ್ಷಣದಲ್ಲಿ ನಾವು ಪೃಥ್ವಿಯ ಇತಿಹಾಸದಲ್ಲಿ ಮತ್ತೊಮ್ಮೆ ಒಂದು ನಿರ್ಧಾರಕ ತಿರುವಿನಲ್ಲಿದ್ದೇವೆ. "ಏನು ಸಂಭವಿಸಲಿದೆ?" ಎಂದು ನನ್ನನ್ನು ಎಲ್ಲ ಬದಿಯಿಂದ ಕೇಳಲಾಗುತ್ತದೆ. ಎಲ್ಲೆಡೆಯಲ್ಲಿ ಬೇಗುದಿಯಿದೆ, ನಿರೀಕ್ಷೆಯಿದೆ, ಭಯವಿದೆ. "ಏನು ಸಂಭವಿಸಲಿದೆ?" ಇದಕ್ಕಿರುವ ಉತ್ತರ ಒಂದೇ ಒಂದು: "ಮನುಷ್ಯ ಆಧ್ಯಾತ್ಮೀಕರಣಗೊಳ್ಳಲು ಒಪ್ಪಿಗೆ ನೀಡಿದರೆ ... ".

ಬಹುಶಃ ಕೆಲವು ವ್ಯಕ್ತಿಗಳು ಶುದ್ಧ ಬಂಗಾರದಂತಾದರೆ ಸಾಕಾಗಬಹುದು. ಏಕೆಂದರೆ ಅದು ಘಟನೆಗಳ ಗತಿಯನ್ನು ಬದಲಿಸಲು ಸಾಕಾಗಬಹುದು. ನಾವು ಈ ಆವಶ್ಯಕತೆಯನ್ನು ಬಹಳ ತುರ್ತಾಗಿ ಎದುರಿಸುತ್ತಿದ್ದೇವೆ. ಭಗವಂತ ನಮ್ಮಿಂದ ಬಯಸುವ ಈ ಶೌರ್ಯ, ಧೈರ್ಯ ಇವುಗಳನ್ನು ಮನುಷ್ಯ ತನ್ನದೇ ತೊಂದರೆಗಳ, ಅಪರಿಪೂರ್ಣತೆಗಳ ಹಾಗೂ ತನ್ನದೇ ಮಬ್ಬುತನಗಳ ವಿರುದ್ಧ ಏಕೆ ಉಪ–ಯೋಗಿಸಬಾರದು? ಆಂತರಿಕ ಶುದ್ಧೀಕರಣದ ಕುಲುಮೆಯನ್ನು ಶೌರ್ಯದಿಂದ ಏಕೆ ಎದುರಿಸಬಾರದು? ಅದರಿಂದಾಗಿ ಇಡೀ ನಾಗರಿಕತೆಯನ್ನು ಅಂಧಕಾರದಲ್ಲಿ ಮುಳುಗಿಸಿಬಿಡುವ ಆ ಭಯಾನಕ, ಬೃಹದಾಕಾರದ ವಿನಾಶದ ಮೂಲಕ ಮತ್ತೊಮ್ಮೆ ಹಾಯ್ದು ಹೋಗುವುದರ ಆವಶ್ಯಕತೆ ಇಲ್ಲದಂತಾಗುವುದು.

ನಮ್ಮೆದುರಿಗೆ ಇರುವ ಸಮಸ್ಯೆ ಇದು: ಪ್ರತಿಯೊಬ್ಬನೂ ಅದಕ್ಕೆ ತನ್ನದೇ ರೀತಿಯಲ್ಲಿ ಪರಿಹಾರ ಕಂಡುಕೊಳ್ಳಬೇಕು.

* "ಮನುಷ್ಯ ಆಧ್ಯಾತ್ಮೀಕರಣಗೊಳ್ಳಲು ಒಪ್ಪಿಗೆ ನೀಡಿದರೆ ಎಲ್ಲವೂ ಬದಲಾಗುವುದು, ಆದರೆ ಅವನ ಮಾನಸಿಕ, ಪ್ರಾಣಿಕ ಹಾಗೂ ಭೌತಿಕ ಸ್ವಭಾವ ಉಚ್ಚತರ ನಿಯಮದ ವಿರುದ್ಧ ಬಂಡಾಯವೇಳುತ್ತದೆ. ಅವನು ತನ್ನ ಅಪರಿಪೂರ್ಣತೆಯನ್ನು ಪ್ರೀತಿಸುತ್ತಾನೆ. – ಶ್ರೀ ಅರವಿಂದರು (13/210)



ನನಗೆ ಕೇಳಲಾದ ಪ್ರಶ್ನೆಗಳಿಗೆ ಇಂದು ಸಾಯಂಕಾಲ ಉತ್ತರ ನೀಡುತ್ತಿರುವೆ. ನನ್ನ ಉತ್ತರ ಶ್ರೀ ಅರವಿಂದರು ನೀಡಿದ ಉತ್ತರವೇ ಆಗಿದೆ "ಮನುಷ್ಯ ಆಧ್ಯಾತ್ಮೀಕರಣಗೊಳ್ಳಲು ಸಮ್ಮತಿ ನೀಡುವುದಾದರೆ ...."

ಮತ್ತು ಇದಕ್ಕೆ ಪೂರಕವಾಗಿ ನಾನು ಹೇಳುತ್ತೇನೆ" ಮನುಷ್ಯನ ದೃಷ್ಟಿಕೋನದಿಂದ ಕಾಲ ಒತ್ತಡ ತರುತ್ತಿದೆ. **– ಶ್ರೀಮಾತೆ**

*

(9/78) ಹೊಸ ಧರ್ಮವೊಂದು ನಿರುಪಯುಕ್ತವಾಗುವುದು ಮಾತ್ರವಲ್ಲ, ಬಹಳ ಹಾನಿಕಾರಕವೂ ಆಗುತ್ತದೆ. ಹೊಸ ಜೀವನವೊಂದನ್ನು ಸೃಷ್ಟಿಸಬೇಕಾಗಿದೆ. ಅದು ಹೊಸ ಪ್ರಜ್ಞೆಯೊಂದಾಗಿದ್ದು ಅದನ್ನು ಅಭಿವ್ಯಕ್ತಪಡಿಸಲೇಬೇಕಾಗಿದೆ. ಇದು ಬೌದ್ಧಿಕ ಮಿತಿಗಳಾಚೆ, ಮಾನಸಿಕ ಸೂತ್ರಗಳಾಚೆ ಇರುವ ಏನೋ ಒಂದು ಪ್ರಕಟವಾಗ–ಬೇಕಾದ ಜೀವಂತ ಸತ್ಯವೊಂದಾಗಿದೆ. **– ಶ್ರೀಮಾತೆ**

*

## ಸದ್ಯದ ಜಗತ್ತು ಹಾಗೂ ಅತಿಮಾನಸ ಜಗತ್ತು

### ಸಾರಭೂತ ವ್ಯತ್ಯಾಸ

(9/277–78) ಸದ್ಯದ ಕ್ಷಣದಲ್ಲಿ ನಾನು ಒತ್ತುಕೊಟ್ಟು ಹೇಳಬೇಕಾದ ವಿಷಯವು ನಮ್ಮ ಜಗತ್ತು ಹಾಗೂ ಅತಿಮಾನಸ ಜಗತ್ತು ಇವುಗಳ ನಡುವಿರುವ ವ್ಯತ್ಯಾಸ ಕುರಿತಾಗಿದೆ. ಅತಿಮಾನಸ ಜಗತ್ತಿನಲ್ಲಿ ಇಲ್ಲಿ ಕಾರ್ಯನಿರ್ವಹಣೆ ಮಾಡುತ್ತಿರುವ ಪ್ರಜ್ಞೆಯೊಂದಿಗೆ ಸಾಗಿ ಹೋದಾಗ ಈ ವ್ಯತ್ಯಾಸ ಅದರ ಭವ್ಯತೆಯಲ್ಲಿ ಕಂಡು ಬಂದಿತು – ಆಳಾತಿಆಳದಲ್ಲಿ ನಡೆಯುತ್ತಿರುವುದರ ಹೊರತಾಗಿ ಇಲ್ಲಿರುವ ಎಲ್ಲವೂ ಕೃತ್ರಿಮವಾಗಿರುವಂತೆ ನನಗೆ ತೋರಿಬಂದಿತು. ಸಾಮಾನ್ಯ ಜೀವನದ ಮೌಲ್ಯಗಳಲ್ಲಿ ಯಾವುದೂ ಸತ್ಯದ ಆಧಾರ ಹೊಂದಿಲ್ಲ. ಅರಿವೆಗಳನ್ನು ಧರಿಸಲಿಕ್ಕಾಗಿ ವಸ್ತ್ರ ದೊರಕಿಸಿ ಅದನ್ನು ಹೊಲಿದು ಧರಿಸಬೇಕಾದ ರೀತಿಯಲ್ಲಿ ನಮ್ಮ ದೇಹಗಳ ಪೋಷಣೆಗಾಗಿ ಬಾಹ್ಯದಿಂದ ವಸ್ತುಗಳನ್ನು ದೊರಕಿಸಿ ಆಹಾರ ತಯಾರಿಸಿ ಸೇವಿಸಬೇಕಾಗುತ್ತದೆ. ಪ್ರತಿಯೊಂದರಲ್ಲಿ ನಮ್ಮ ಜೀವನ ಕೃತ್ರಿಮವಾಗಿರುತ್ತದೆ.

ಅತಿಮಾನಸ ಜಗತ್ತಿನಲ್ಲಿರುವ ನಿಜವಾದ, ನಿಷ್ಕಪಟವಾದ ಸಹಜ ಜೀವನವು ಪ್ರಜ್ಞಾಪೂರ್ಣ ಸಂಕಲ್ಪದ ಮೂಲಕ ವಸ್ತು–ವಿಷಯಗಳಿಂದ ಪುಟಿದು ಮೇಲೆದ್ದು

ನಾವೇನಾಗಬೇಕೆಂದು ನಿರ್ಧರಿಸಿರುತ್ತೇವೆಯೋ ಅದರೊಂದಿಗೆ ಸಾಮರಸ್ಯದಿಂದ ಇರುವ ಪದಾರ್ಥವಾಗುತ್ತದೆ. ಜ್ಞಾನ ಹಾಗೂ ಸಾಮರ್ಥ್ಯಗಳಿರುವ ಮನುಷ್ಯ ತನಗೆ ಬೇಕಾದುದನ್ನು ದೊರಕಿಸುತ್ತಾನೆ, ಅವುಗಳನ್ನು ಹೊಂದಿರದ ಮನುಷ್ಯನಿಗೆ ಅವನು ಬಯಸಿದ್ದನ್ನು ಪಡೆಯಲು ಕೃತ್ರಿಮ ಸಾಧನಗಳಿರುವುದಿಲ್ಲ.

ಸಾಮಾನ್ಯ ಜೀವನದಲ್ಲಿ ಎಲ್ಲವೂ ಕೃತ್ರಿಮವಾಗಿರುತ್ತದೆ. ಜನ್ಮ ತಳೆದ ಅವಕಾಶ ಇಲ್ಲವೆ ಪರಿಸ್ಥಿತಿಯ ಪ್ರಕಾರ ನಿಮಗೆ ಉಚ್ಚ ಇಲ್ಲವೆ ಕೆಳಮಟ್ಟದ ಸ್ಥಾನವಿರುತ್ತದೆ ಇಲ್ಲವೆ ಹೆಚ್ಚು ಕಡಿಮೆ ಸೌಲಭ್ಯಗಳನ್ನು ಹೊಂದಿದ ಜೀವನವಿರುತ್ತದೆ, ಅದು ನೀವಿರುವ ರೀತಿಯ ಹಾಗೂ ನಿಮ್ಮ ಆಂತರಿಕ ಆವಶ್ಯಕತೆಯ ಸಹಜ ಸ್ವಾಭಾವಿಕ ನಿಷ್ಕಪಟ ಅಭಿವ್ಯಕ್ತಿಯಾಗಿದೆ ಎಂಬ ಕಾರಣದಿಂದಾಗಿರುವುದಿಲ್ಲ, ಆದರೆ ಜೀವನದಲ್ಲಿ ಅಕಸ್ಮಾತ್ ಪರಿಸ್ಥಿತಿಗಳು ನಿಮ್ಮನ್ನು ಈ ವಸ್ತು–ವಿಷಯಗಳ ಸಂಪರ್ಕಕ್ಕೆ ತಂದಿವೆ ಎಂಬ ಕಾರಣದಿಂದಾಗಿರುತ್ತದೆ. ಸಂಪೂರ್ಣವಾಗಿ ಅಯೋಗ್ಯನಾದ ಮನುಷ್ಯ ಬಹಳ ಉಚ್ಚ ಸ್ಥಾನದಲ್ಲಿರುಬಹುದು, ಸೃಷ್ಟಿಸಲು ಹಾಗೂ ಸಂಘಟಿಸಲು ಅದ್ಭುತ ಸಾಮರ್ಥ್ಯವಿರುವ ಮನುಷ್ಯ ಅತ್ಯಂತ ಸೀಮಿತವಾಗಿರುವ ಸನ್ನಿವೇಶದಲ್ಲಿ ತೊಳಲಾಡುತ್ತ ಇರುವುದನ್ನು ಕಂಡುಕೊಳ್ಳಬಹುದು, ಅದು ಹಾಗಿರುವಾಗ ಜಗತ್ತು ನಿಷ್ಕಪಟವಾಗಿದ್ದರೆ ಅವನು ಸಂಪೂರ್ಣವಾಗಿ ಉಪಯುಕ್ತವಾಗಬಲ್ಲ ಮನುಷ್ಯ–ನಾಗಬಹುದು.

ಎಷ್ಟೊಂದು ಆಘಾತಕಾರಿಯಾಗಿದೆ ಎಂದು ತೋರಿಬರುವ ಈ ಕೃತ್ರಿಮತೆ, ಈ ಕಪಟತನ, ಸಂಪೂರ್ಣವಾಗಿ ಸತ್ಯರಹಿತವಾಗಿರುವಿಕೆ ಇವುಗಳಿಂದಾಗಿ ಇಂತಹ ಮಿಥ್ಯೆಯ ಜಗತ್ತಿನಲ್ಲಿ ನಾವು ಯಾವುದೇ ನಿಜವಾದ ಮೌಲ್ಯಮಾಪನ ಕಂಡುಕೊಳ್ಳ–ಬಹುದೇ ಎಂದು ನಮಗೆ ಆಶ್ಚರ್ಯವಾಗುತ್ತದೆ.

*

**ಅಧಿಮಾನಸ ಜಗತ್ತು**

ಶ್ರೀ ಅರವಿಂದರ ಕಾರ್ಯ ಪೃಥ್ವಿಯ ಪರಿವರ್ತನೆಯಲ್ಲಿ ಅನನ್ಯವಾಗಿದೆ.

ಮನಸ್ಸಿನ ಸ್ತರದ ಮೇಲೆ ಪ್ರಜ್ಞಾಸತ್ತೆಯ ಹಲವಾರು ಸ್ತರಗಳಿವೆ. ಅವುಗಳಲ್ಲಿ ನಿಜವಾಗಿಯೂ ದೈವಿಕವಾದದ್ದನ್ನು ಶ್ರೀ ಅರವಿಂದರು ಅತಿಮಾನಸ ಜಗತ್ತು ಎಂದು ಕರೆದಿದ್ದಾರೆ, ಅದು ದೈವೀ ಸತ್ಯವನ್ನು ಹೊಂದಿದೆ. ಆದರೆ ಮನಸ್ಸಿನ ಸ್ತರ ಹಾಗೂ



ಅತಿಮಾನಸ ಸ್ತರ ಇವುಗಳ ನಡುವೆ ವಿಶ್ವವ್ಯಾಪಿ ದೇವತೆಗಳಿರುವ ಜಗತ್ತಿದೆ, ಅದು ಅಧಿಮಾನಸ ಜಗತ್ತು ಎಂದು ಅವರು ಗುರುತಿಸಿದ್ದಾರೆ. ಇಲ್ಲಿಯವರೆಗೆ ಅಧಿ–ಮಾನಸವೇ ನಮ್ಮ ಜಗತ್ತಿನ ಮೇಲೆ ತನ್ನ ಅಧಿಪತ್ಯ ನಡೆಸುತ್ತ ಬಂದಿದೆ. ಮನುಷ್ಯ ಜ್ಞಾನೋದಯ ಪಡೆದ ತನ್ನ ಪ್ರಜ್ಞೆಯಲ್ಲಿ ಸಿದ್ಧಿಸಿಕೊಂಡ ಅತ್ಯುಚ್ಚ ಪ್ರಜ್ಞೆಯ ಸ್ತರ ಅಧಿಮಾನಸದ್ದಾಗಿದೆ. ಅದನ್ನೇ ಪರಮೋಚ್ಚ ಭಗವಂತನ ಜಗತ್ತೆಂದು ಭಾವಿಸ–ಲಾಗಿದೆ. ಅದನ್ನು ತಲುಪಿದ ಎಲ್ಲ ಜನರು ತಾವು ನಿಜವಾದ ದಿವ್ಯಾತ್ಮನನ್ನು ಸ್ಪರ್ಶಿಸಿದ್ದೇವೆ ಎಂಬುದರಲ್ಲಿ ಸಂಶಯ ತಾಳಿರಲಿಲ್ಲ. ಏಕೆಂದರೆ ಅದರ ವೈಭವಗಳು ಎಷ್ಟೊಂದು ಭವ್ಯವಾಗಿವೆಯೆಂದರೆ ಅಲ್ಲಿಯೇ ಕಿರೀಟಪ್ರಾಯವಾದ ನೈಜತೆ ಇದೆ ಎಂದು ಕಣ್ಣುಕುಕ್ಕಿಸುವಂತೆ ಮಾಡಿದೆ. ಆದಾಗ್ಯೂ ವಾಸ್ತವ ಸಂಗತಿ ಎಂದರೆ ಅಧಿಮಾನಸ ನಿಜವಾದ ಭಗವಂತನ ಸ್ತರಕ್ಕಿಂತ ಬಹಳ ಕೆಳಮಟ್ಟದಲ್ಲಿದೆ. ಅದು ದೈವೀ ಸತ್ಯದ ವಿಶ್ವಾಸಾರ್ಹ ನಿವಾಸವಲ್ಲ. ಇತಿಹಾಸದ ಪ್ರಾರಂಭದಿಂದ ಜನರು ಬಾಗಿ ನಮಸ್ಕರಿಸುತ್ತ ಬಂದಿರುವ ಆ ಎಲ್ಲ ಸಾಮರ್ಥ್ಯಗಳ ಹಾಗೂ ದೇವತೆಗಳ ವ್ಯವಸ್ಥಾಕ್ರಮಗಳ ಪ್ರಾಂತವಾಗಿದೆ. ನಿಜವಾದ ಭಗವಂತ ತನ್ನನ್ನು ಪ್ರಕಟಿಸದೆ, ಪೃಥ್ವಿಯ ಸ್ವಭಾವವನ್ನು ಪರಿವರ್ತಿಸದೆ ಇದ್ದುದಕ್ಕೆ ನಿಖರವಾದ ಕಾರಣ ಅಧಿ–ಮನಸ್ಸನ್ನು ಅತಿಮನಸ್ಸು ಎಂದು ತಪ್ಪಾಗಿ ತಿಳಿದುದಾಗಿದೆ. ದೇವತೆಗಳು ಇಡಿಯಾಗಿ ಸತ್ಯಪ್ರಜ್ಞೆ (ಋತಚಿತ್)ಯಲ್ಲಿ ಜೀವಿಸುವುದಿಲ್ಲ, ಅವರು ಕೇವಲ ಅದರ ಸಂಪರ್ಕ–ದಲ್ಲಿದ್ದಾರೆ ಮತ್ತು ಪ್ರತಿಯೊಬ್ಬರು ಅತಿಮಾನಸದ ವೈಭವಗಳಲ್ಲಿ ಒಂದನ್ನು ಪ್ರತಿ–ನಿಧಿಸುತ್ತಾರೆ.

ನಿಸ್ಸಂಶಯವಾಗಿ, ಜಗತ್ತಿನ ಇತಿಹಾಸದಲ್ಲಿ ಅತಿಮಾನಸವೂ ಕೂಡ ಕಾರ್ಯ–ಕೈಕೊಂಡಿದೆ, ಆದರೆ ಆ ಕಾರ್ಯ ಅಧಿಮಾನಸದ ಮೂಲಕವಾಗಿತ್ತು. ಅತಿಮಾನಸ ಪ್ರಜ್ಞೆಯ ನೇರ ಅವರೋಹಣ ಮಾತ್ರ ದಿವ್ಯಾತ್ಮದ ಷರತ್ತುಗಳ ಪ್ರಕಾರ ಸಂಪೂರ್ಣವಾಗಿ ಜೀವನವನ್ನು ಪುನರ್ಸೃಷ್ಟಿಸಬಹುದು. ಏಕೆಂದರೆ ಅಧಿಮಾನಸ–ದಲ್ಲಿ ಅದಾಗಲೆ ಸಾಧ್ಯತೆಗಳ ಲೀಲೆಯಿರುತ್ತದೆ, ಅದು ಮನಸ್ಸು ಪ್ರಾಣ ಹಾಗೂ ಭೌತ ದ್ರವ್ಯಗಳಿರುವ ತ್ರಿಗುಣಾತ್ಮಕ ನಿಮ್ನತರ ಜಗತ್ತಿನ ಪ್ರಾರಂಭವನ್ನು ಸೂಚಿಸು–ತ್ತದೆ, ಅದರಲ್ಲಿ ನಮ್ಮ ಅಸ್ತಿತ್ವವಿದೆ. ಈ ಲೀಲೆ ಇರುವಾಗ ಮತ್ತು ದಿವ್ಯಾತ್ಮದ ಸ್ವಾಭಾವಿಕ ದೈವೀ ಸತ್ಯದ ಸ್ವಯಂಪ್ರೇರಿತ, ವಿಫಲವಾಗದ ಕಾರ್ಯಗತಿ ಇಲ್ಲದೆ ಇದ್ದಾಗ ವಿರೂಪಗೊಳ್ಳುವಿಕೆಯ ಹಾಗೂ ಅಜ್ಞಾನದ ಬೀಜವಿರುತ್ತದೆ. ಅಧಿ–

ಮಾನಸವು ಅಜ್ಞಾನದ ಕ್ಷೇತ್ರವಾಗಿದೆ ಎಂದಲ್ಲ, ಆದರೆ ಅದು ಉಚ್ಚತರ ಹಾಗೂ ನಿಮ್ನತರವಾದವುಗಳ ನಡುವಿನ ಸೀಮಾ ರೇಖೆಯಾಗಿದೆ, ಏಕೆಂದರೆ ಸಾಧ್ಯತೆಗಳ ಲೀಲೆ, ಪ್ರತ್ಯೇಕ ವಿಭಜನೆ ಹೊಂದದ ಆಯ್ಕೆಯಿದ್ದಾಗಲೂ ಕೂಡ, ವಸ್ತು–ವಿಷಯಗಳ ದೈವೀಸತ್ಯದಿಂದ ಅಡ್ಡಹೊರಳುವಿಕೆಯತ್ತ ಮುನ್ನಡೆಸಿಕೊಂಡು ಹೋಗುವುದು ಸಂಭವನೀಯವಾಗಿರುತ್ತದೆ.

ಆದ್ದರಿಂದ ಅಧಿಮಾನಸವು ಮಾನವತೆಯನ್ನು ದೈವೀ ಸ್ವಭಾವ ಹೊಂದುವಂತೆ ಪರಿವರ್ತನೆಗೊಳಪಡಿಸುವ ಸಾಮರ್ಥ್ಯವನ್ನು ಹೊಂದಿರುವುದಿಲ್ಲ, ಹೊಂದಿರುವುದು ಸಾಧ್ಯವಿಲ್ಲ, ಅದಕ್ಕಾಗಿ ಅತಿಮಾನಸ ಮಾತ್ರ ಏಕೈಕ ಪರಿಣಾಮಕಾರಿ ನಿಯೋಗಿಯಾಗಿದೆ. ಜೀವನವನ್ನು ಆಧ್ಯಾತ್ಮೀಕರಣಗೊಳಿಸುವ ಪ್ರಯತ್ನದಲ್ಲಿ ತೊಡಗಿದ್ದ ಗತಕಾಲದ ಯೋಗಗಳಿಂದ ನಮ್ಮ ಯೋಗದಲ್ಲಿ ಭಿನ್ನವಾದುದು ಏನೆಂದರೆ ಅಧಿಮಾನಸದ ಭವ್ಯತೆಗಳು ಅತಿ ಉಚ್ಚವಾದ ನೈಜತೆಯುಳ್ಳವುಗಳಲ್ಲ, ಆದರೆ ನಿಜವಾದ ಭಗವಂತ ಮತ್ತು ಮನಸ್ಸು ಇವುಗಳ ನಡುವೆ ಇರುವ ಹೆಜ್ಜೆಗಳ ಹಾಗಿವೆ ಎಂಬುದಾಗಿದೆ. **– ಶ್ರೀಮಾತೆ**

*

(15/98) ತಾತ್ಕಾಲಿಕವಾಗಿ ಜೀವಿಸುವ ದೇಹದ ಜನ್ಮ ಕುರಿತು ಉತ್ಸಾಹದ ಆಚರಣೆ ಕೆಲವೊಂದು ವಿಶ್ವಾಸಪೂರ್ಣ ಭಾವನೆಗಳಿಗೆ ತೃಪ್ತಿತಂದುಕೊಡಬಹುದು.

ಸನಾತನ ಪ್ರಜ್ಞೆಯ ಪ್ರಕಟಣೆಯನ್ನು ಕುರಿತು ಉತ್ಸಾಹದ ಆಚರಣೆಯನ್ನು ವಿಶ್ವದ ಇತಿಹಾಸದಲ್ಲಿ ಪ್ರತಿಕ್ಷಣ ಮಾಡಬಹುದು.

ಆದರೆ ಅತಿಮಾನಸದ ಹೊಸ ಜಗತ್ತಿನ ಆಗಮನವನ್ನು ಕುರಿತು ಉತ್ಸಾಹದ ಆಚರಣೆ ಅದ್ಭುತ ಹಾಗೂ ಅಸಾಧಾರಣ ಭಾಗ್ಯವಿದ್ದಂತೆ. **– ಶ್ರೀಮಾತೆ**

## ಹೊಸ ದೈವೀ ಪ್ರಜ್ಞೆಯನ್ನು ಸ್ವೀಕರಿಸುವುದಕ್ಕೆ ನಾವು ಸಿದ್ಧತೆ ಮಾಡಿಕೊಳ್ಳುವುದು ಹೇಗೆ?

(15/106–08) ಹೊಸ ದೈವೀ ಪ್ರಜ್ಞೆಯನ್ನು ಸ್ವೀಕರಿಸುವುದಕ್ಕೆ ಸಿದ್ಧತೆ ಮಾಡಿ–ಕೊಳ್ಳಲು ಮೊದಲ ಅತ್ಯಗತ್ಯವಾದ ನಿಬಂಧನೆ ಎಂದರೆ ನಿಜವಾದ ವಿನಮ್ರತೆ ಹೊಂದಿರುವುದಾಗಿದೆ, ನಾವು ದೊರಕಿಸಬೇಕಾದ ಅದ್ಭುತ ವಿಷಯಗಳ ಎದುರಿನಲ್ಲಿ



ನಾವು ಏನನ್ನೂ ತಿಳಿದಿಲ್ಲ ಮತ್ತು ನಾವು ಏನೂ ಆಗಿಲ್ಲ ಎಂಬುದನ್ನು ಅದು ಆಳವಾಗಿ ಭಾವನೆಗೆ ತಂದುಕೊಳ್ಳುವಂತೆ ಮಾಡುತ್ತದೆ.

*

**ಪ್ರಶ್ನೆ :** *ಕಳೆದ ವರ್ಷ ಅವರೋಹಣ ಮಾಡಿದ ಹೊಸ ಪ್ರಜ್ಞೆಯ ಕಾರ್ಯಗತಿಗೆ ಅನುವು ಮಾಡಿಕೊಡಲು ಸಾಧಕ ಏನು ಮಾಡಬೇಕು?*

**ಶ್ರೀಮಾತೆ :** 1. ಸ್ವೀಕರಿಸುವ ಸ್ಥಿತಿಯಲ್ಲಿರಬೇಕು, 2. ನಮ್ರನಾಗಿರಬೇಕು.

*

**ಪ್ರಶ್ನೆ :** *ಅಸ್ತವ್ಯಸ್ತತೆ ಮತ್ತು ಮಹಾ ದುರಂತಗಳು ಬಹುಶಃ ಹೊಸ ಸೃಷ್ಟಿ ಜನ್ಮ ತಾಳುತ್ತಿರುವಾಗ ಆಗುವ ತೀವ್ರ ಪ್ರಸವ ವೇದನೆಯ ಸ್ವರೂಪದವುಗಳಾಗಿರಬಹುದು ಎಂದು ಶ್ರೀ ಅರವಿಂದರು 1919ರಲ್ಲಿ ಬರೆದಿದ್ದರು. ಇದು ಇನ್ನೂ ಎಷ್ಟು ಕಾಲದವರೆಗೆ ಆಶ್ರಮದಲ್ಲಿ, ಭಾರತದಲ್ಲಿ ಕೊನೆಗೆ ಜಗತ್ತಿನಲ್ಲಿ ಮುಂದುವರಿಯ–ಬಹುದು?*

**ಶ್ರೀಮಾತೆ :** ಜಗತ್ತು ಸಿದ್ಧವಾಗುವವರೆಗೆ, ಮತ್ತು ಹೊಸ ಸೃಷ್ಟಿಯನ್ನು ಸ್ವೀಕರಿಸಲು ಸ್ವ–ಸಂತೋಷದಿಂದ ಒಪ್ಪಿಗೆ ನೀಡುವವರೆಗೆ ಅದು ಮುಂದುವರಿಯುತ್ತದೆ; ಈ ಹೊಸ ಸೃಷ್ಟಿಯ ಪ್ರಜ್ಞೆ ಈ ವರ್ಷದ ಪ್ರಾರಂಭದಿಂದ ಈಗಾಗಲೇ ಕಾರ್ಯನಿರತ–ವಾಗಿದೆ. ಜನರು ವಿರೋಧಿಸದೆ ಸಹಕಾರ ನೀಡಿದರೆ ಅದು ತೀವ್ರಗತಿಯಿಂದಾಗು–ವುದು, ಆದರೆ ಮೌಢ್ಯ ಮತ್ತು ಅಜ್ಞಾನ ಹಟಮಾರಿಯಾಗಿವೆ.

*

**ಪ್ರಶ್ನೆ :** *"ಜಗತ್ತು ಭವ್ಯ ಬದಲಾವಣೆಗಾಗಿ ತಯಾರಾಗುತ್ತಿದೆ, ನೀವು ಸಹಾಯ ಮಾಡುವಿರಾ?" ನೀವು ಹೇಳುವ ಈ ಭವ್ಯ ಬದಲಾವಣೆ ಎಂದರೆ ಏನು? ಮತ್ತು ನಾವು ಅದಕ್ಕೆ ಹೇಗೆ ಸಹಾಯ ಸಲ್ಲಿಸಬಲ್ಲೆವು?*

**ಶ್ರೀಮಾತೆ :** ಈ ಭವ್ಯ ಬದಲಾವಣೆ ಎಂದರೆ ಪೃಥ್ವಿಯ ಮೇಲೆ ಹೊಸ ಕುಲ ಕಾಣಿಸಿಕೊಳ್ಳುವುದಾಗಿದೆ. ಪಶುವಿಗೆ ಮನುಷ್ಯ ಏನಾಗಿದ್ದಾನೋ ಹಾಗೆ ಮನುಷ್ಯನಿಗೆ ಆ ಹೊಸ ಕುಲವಿರುತ್ತದೆ. ಅದನ್ನು ಸ್ವೀಕರಿಸಲು ಮತ್ತು ಅದರತ್ತ ಗಮನಹರಿಸಲು ಶಕ್ತರಾದವರಿಗೆ ಜ್ಞಾನೋದಯವನ್ನುಂಟು ಮಾಡಲು ಈ ಪ್ರಜ್ಞೆ ಈಗಾಗಲೆ ಕಾರ್ಯ ನಿರತವಾಗಿದೆ.

*

**ಪ್ರಶ್ನೆ :** *ನನಗೆ ಸಹಾಯ ಮಾಡಿರೆಂದು ನೀವು ನಮ್ಮನ್ನು ಕೇಳಿದ್ದೀರಿ. ನಾವು ನಿಮಗೆ ಹೇಗೆ ಸಹಾಯ ಸಲ್ಲಿಸಬಲ್ಲೆವು? ನಾವೇನು ಮಾಡಬೇಕು?*

**ಶ್ರೀಮಾತೆ :** ಈ ಹೊಸ ಪ್ರಗತಿಪರ ಪ್ರಜ್ಞೆಯನ್ನು ಸ್ವೀಕರಿಸಲು ಏಕಾಗ್ರತೆಯಲ್ಲಿ–ರುವುದು ಮತ್ತು ನಿಮ್ಮನ್ನು ತೆರೆದಿರಿಸಿಕೊಳ್ಳುವುದು, ಕೆಳಗಿಳಿದು ಬರುತ್ತಿರುವ ಹೊಸ ವಿಷಯಗಳನ್ನು ಸ್ವೀಕರಿಸುವುದು.

*

ಆ ಬದಲಾವಣೆ ಬರುವುದಕ್ಕೆ ನಮ್ಮ ಸಹಾಯದ ಆವಶ್ಯಕತೆ ಇಲ್ಲ. ಆದರೆ ನಾವು ಆ ಪ್ರಜ್ಞೆಗೆ ತೆರೆದಿಟ್ಟುಕೊಳ್ಳುವುದರ ಆವಶ್ಯಕತೆ ಇದೆ, ಅದರಿಂದಾಗಿ ಅದರ ಬರುವಿಕೆ ನಮಗೆ ವ್ಯರ್ಥ್ಯವಾಗುವುದಿಲ್ಲ.

*

ಅದು ಅತಿ ಸೂಕ್ಷ್ಮವಾದ ಕಾರ್ಯಗತಿ, ಬಹುಶಃ ಅದು ಅಪರಿಚಿತವಾದದ್ದು ಎಂಬ ಕಾರಣದಿಂದ ಹಾಗೆ ತೋರಿಬರಬಹುದು. ಕನಿಷ್ಠ ಮಟ್ಟದ ಚಲನೆ, ಅತ್ಯಂತ ಚಿಕ್ಕ ಮಾನಸಿಕ ಕಂಪನ ಎಲ್ಲವನ್ನೂ ಕ್ಷೋಭೆಗೊಳಪಡಿಸುವಂತೆ ಮಾಡುತ್ತದೆ. ಆದರೆ ಅದು ಉಳಿದುಕೊಂಡಿರುವವರೆಗೆ ಪರಿಪೂರ್ಣವಾಗಿ ಪರಿಶುದ್ಧ–ವಾಗಿರುತ್ತದೆ. ಮತ್ತು ಅದು ಅತಿಮಾನಸೀಕರಣಗೊಂಡ ಜೀವನದ ನಿರಂತರ ಸ್ಥಿತಿಯಾಗಿರಬೇಕು. ಮಾನಸೀಕರಣಗೊಂಡ ಆಧ್ಯಾತ್ಮಿಕ ಸಂಕಲ್ಪ ಇನ್ನು ಮುಂದೆ ಮಧ್ಯೆ ಪ್ರವೇಶಿಸಬಾರದು. ಏಕೆಂದರೆ ಮನುಷ್ಯನಲ್ಲಿ ಆಧ್ಯಾತ್ಮಿಕ ಸಂಕಲ್ಪ ಸರಿಯಾದ ರೀತಿಯಲ್ಲಿಯೇ ಇರಬಹುದು, ಅವನು ಸತತ ಆಧ್ಯಾತ್ಮಿಕ ಸಂಕಲ್ಪವನ್ನು ಅಭಿವ್ಯಕ್ತ–ಗೊಳಿಸುತ್ತ ಜೀವಿಸಿರಬಹುದು – ಅಂತರ್ಯದಲ್ಲಿರುವ ಭಗವಂತನ ಮಾರ್ಗ–ದರ್ಶನ ತಮಗೆ ದೊರೆಯುತ್ತಿದೆ ಎಂದು ಭಾವಿಸಿಕೊಂಡವರಿಗೆ ಸಂಭವಿಸುವುದು ಅದೇ ಆಗಿರುತ್ತದೆ. – ಆದರೆ ಅದು ಮಾನಸಿಕ ನಕಲಿನ ಮೂಲಕ ಬರುತ್ತದೆ. ಅದಕ್ಕೆ (ಅತಿಮಾನಸ ಜೀವನಕ್ಕೆ) ಕ್ಷೋಭೆ ಉಂಟುಮಾಡಲು ಕೊಂಚ ಮಾತ್ರ ತುಡಿತವೂ ಸಾಕಾಗುತ್ತದೆ.

*

ಹೊಸ ದೈವೀ ಸತ್ತೆ ಬರುವುದಕ್ಕಾಗಿ ನಮಗೆ ಸಾಧ್ಯವಿದ್ದಷ್ಟು ಒಳ್ಳೆಯ ರೀತಿಯಲ್ಲಿ ತಯಾರಿ ಮಾಡಿಕೊಳ್ಳೋಣ.



ಮನಸ್ಸು ನಿಶ್ಚಲ ನೀರವತೆಯಲ್ಲಿರುವಂತೆ ಮಾಡಬೇಕು ಮತ್ತು ಮನಸ್ಸಿನ ಸ್ಥಾನದಲ್ಲಿ ಸತ್ಯ ಪ್ರಜ್ಞೆ (ಋತಚಿತ್) ಬರಬೇಕು – ಆ ಪ್ರಜ್ಞೆ ವಿವರಗಳ ಪ್ರಜ್ಞೆ–ಯೊಂದಿಗೆ ಇಡಿಯದರ ಪ್ರಜ್ಞೆಯನ್ನು ಸಾಮರಸ್ಯದಲ್ಲಿರಿಸಿಕೊಂಡಿರಬೇಕು.

*

**ಪ್ರಶ್ನೆ :** *ಭವಿಷ್ಯತ್ತಿಗಾಗಿ ಕಾರ್ಯ ಮಾಡುವುದೆಂದರೇನು?*

**ಶ್ರೀಮಾತೆ :** ಪ್ರಾರಂಭದಲ್ಲಿ ವೈಯಕ್ತಿಕ ಹಾಗೂ ರಾಷ್ಟ್ರೀಯ ಹಳೆಯ ರೂಢಿಗಳಿಗೆ ಅಂಟಿಕೊಂಡು ಇರದೇ ಇರುವುದಾಗಿದೆ.

*

ದೈವೀ ಸತ್ಯ ನಿಮ್ಮ ಪ್ರಭು ಹಾಗೂ ಮಾರ್ಗದರ್ಶಕ ಆಗಲಿ.

ನಾವು ದೈವೀ ಸತ್ಯಕ್ಕಾಗಿ, ಮತ್ತು ಅದರ ವಿಜಯ ನಮ್ಮ ಸತ್ತೆಯಲ್ಲಿ ಹಾಗೂ ನಮ್ಮ ಚಟುವಟಿಕೆಗಳಲ್ಲಿ ಆಗುವುದಕ್ಕಾಗಿ ಅಭೀಪ್ಸೆಪಡುತ್ತೇವೆ.

ದೈವೀ ಸತ್ಯಕ್ಕಾಗಿ ಇರುವ ನಮ್ಮ ಅಭೀಪ್ಸೆ ನಮ್ಮ ಪ್ರಯತ್ನಗಳಿಗೆ ಹುರುಪು ನೀಡುವಂತಾಗಲಿ.

ಓ ದೈವೀ ಸತ್ಯವೆ, ನಿನ್ನಿಂದ ನಾವು ಮಾರ್ಗದರ್ಶನ ಪಡೆಯಲು ಬಯಸುತ್ತೇವೆ, ನಿನ್ನ ಆಳಿಕೆ ಪೃಥ್ವಿಯ ಮೇಲೆ ಬರಲಿ. **– ಶ್ರೀಮಾತೆ**

*

(8/205) ಸತ್ಯ ಹೇಳುವುದಾದರೆ ಪ್ರತಿಯೊಬ್ಬನೂ ಅತಿ ಚಿಕ್ಕವನಾಗಿರುತ್ತಾನೆ, ಅದೆಷ್ಟು ಚಿಕ್ಕವನೆಂದರೆ ಅವನಲ್ಲಿ ಅತಿಮಾನಸವನ್ನು ಇರಿಸುವುದಕ್ಕೆ ಸ್ಥಳ–ವಿರುವುದಿಲ್ಲ. ಆ ಸ್ಥಳ ಎಷ್ಟೊಂದು ಚಿಕ್ಕದಾಗಿದೆಯೆಂದರೆ ಅದು ಈಗಾಗಲೆ ಸಾಮಾನ್ಯ ಮಾನವನ ಚಿಕ್ಕ ಚಲನೆಗಳಿಂದ ತುಂಬಿಕೊಂಡಿದೆ. ಅತಿ ಮನಸ್ಸಿನ ಚಲನೆಗಳಿಗೆ ಜಾಗ ಮಾಡಿಕೊಡಲು ಅಲ್ಲಿ ಭವ್ಯ ವಿಸ್ತರಣೆ ಮಾಡಿಕೊಳ್ಳಬೇಕಾದ ಆವಶ್ಯಕತೆ ಇದೆ. **– ಶ್ರೀಮಾತೆ**

*

## ಹೊಸ ಸೃಷ್ಟಿಯ ಪ್ರಭಾವದಡಿಯಲ್ಲಿ ಮಾನವತೆಯನ್ನು ಕುರಿತು ಶ್ರೀಮಾತೆಯವರ ದರ್ಶನ

(11/24–27) ಹೊಸ ಇಲ್ಲವೆ ಅತಿಮಾನಸ ಸೃಷ್ಟಿಗೆ ಸಂಬಂಧಿಸಿದಂತೆ ಮಾನವತೆಯ ಸ್ಥಿತಿ ಹಾಗೂ ಸಮಾಜದ ವಿಭಿನ್ನ ಸ್ತರಗಳಲ್ಲಿ ಉಂಟಾಗುವ ಸ್ಥಿತಿ ಕುರಿತು ಮೂರ್ತರೂಪದ ಹಾಗೂ ಜೀವಂತವಿರುವ ದರ್ಶನದಲ್ಲಿ ಒಂದು ಗಂಟೆಗಿಂತಲೂ ಹೆಚ್ಚಿನ ಕಾಲ ನಾನು ಜೀವಿಸಿರುವಂತೆ ಶ್ರೀ ಅರವಿಂದರು ಮಾಡಿದರು. ಅದು ಅದ್ಭುತವಾಗಿ ಸ್ಪಷ್ಟವಾದದ್ದು, ಮೂರ್ತರೂಪದ್ದು ಹಾಗೂ ಜೀವಂತವಾದದ್ದು ಆಗಿತ್ತು.

ಆ ದರ್ಶನ ಎಷ್ಟೊಂದು ಘನತೆ, ಶಾಂತಿ ಹಾಗೂ ಮುಗುಳ್ನಗೆ ಇರುವ ಸೌಂದರ್ಯದಿಂದ ಕೂಡಿತ್ತು ಓಹ್, ಅದು ನಿಜವಾಗಿ ದೈವೀ ಪ್ರೇಮದಿಂದ ತುಂಬಿಕೊಂಡಿತ್ತು. ಕ್ಷಮಿಸುವ ಮನೋಭಾವದ ಪ್ರೇಮ ಅದಾಗಿರಲಿಲ್ಲ, ಅಂತಹದು ಅದು ಆಗಿರಲೇ ಇಲ್ಲ. ಪ್ರತಿಯೊಂದು ಅದರದರ ಸ್ಥಾನದಲ್ಲಿ ಕ್ರಮಬದ್ಧ ಗತಿಯನ್ನು ಸಾಧ್ಯವಿದ್ದಷ್ಟು ಪರಿಪೂರ್ಣ ರೀತಿಯಲ್ಲಿ ಸಿದ್ಧಿಸಿಕೊಳ್ಳುತ್ತಿತ್ತು.

ಅದೊಂದು ಬಹಳ ಸುಂದರ ಕಾಣಿಕೆಯಾಗಿತ್ತು.

ಸರಿ, ಈ ಎಲ್ಲ ವಿಷಯಗಳನ್ನು ಜನರು ಭಾಗಶಃ ಬೌದ್ಧಿಕವಾಗಿ, ವಿಚಾರಗಳಲ್ಲಿ ತಿಳಿದುಕೊಂಡಿರುತ್ತಾರೆ, ಅದೆಲ್ಲವೂ ಅವರಿಗೆ ತಿಳಿದಿರುತ್ತದೆ, ಆದರೆ ಅದು ಸಂಪೂರ್ಣವಾಗಿ ನಿರುಪಯುಕ್ತವಾದದ್ದು. ದಿನನಿತ್ಯದ ಆಚರಣೆಯಲ್ಲಿ ನೀವು ಇನ್ನೊಂದು ರೀತಿಯಲ್ಲಿ ಹೆಚ್ಚು ನಿಜವಾದ ತಿಳಿವಳಿಕೆಯೊಂದಿಗೆ ಜೀವಿಸುತ್ತೀರಿ. ಮತ್ತು ಅಲ್ಲಿ ವಿಷಯಗಳನ್ನು, ಅವುಗಳ ಉಚ್ಚತರ ಮನೋಧರ್ಮದಲ್ಲಿ ಸ್ಪರ್ಶಿಸಿದ ಹಾಗೆ, ನೋಡಿದ ಹಾಗಿರುತ್ತದೆ.

ಸಸ್ಯಗಳ ಹಾಗೂ ಅವುಗಳ ಸಹಜ ಸೌಂದರ್ಯದ ದರ್ಶನ, ನಂತರ ಅತ್ಯಂತ ಸಾಮರಸ್ಯದಿಂದ ಕೂಡಿದ ಪಶುಗಳ ಜೀವನದ ದರ್ಶನ ! ಅದು ಹಾಗಿರುವುದು ಮನುಷ್ಯ ಮಧ್ಯೆ ಪ್ರವೇಶಿಸದೆ ಇದ್ದಾಗ ! ಅದೆಲ್ಲವೂ ಅದರದರ ಸ್ಥಾನದಲ್ಲಿದ್ದುದರ ದರ್ಶನ ಅನಂತರ ಮಾನವತೆಯಿಂದಿರಬೇಕಾದ ಮಾನವತೆಯ ದರ್ಶನ, ಎಂದರೆ ಮಾನಸಿಕ ಸಮಚಿತ್ತತೆ ಸೃಷ್ಟಿಸಬಹುದಾದ ಗರಿಷ್ಠಮಟ್ಟದ ಸೌಂದರ್ಯ, ಸಾಮರಸ್ಯ,



ಸೊಬಗು, ಜೀವನದ ಅಂದಚೆಂದ, ಜೀವನದ ರಸಗ್ರಹಣ – ಕುರೂಪದ್ದಾದ, ನಿಮ್ನವಾದ ಮತ್ತು ಅಸಭ್ಯವಾದ ಎಲ್ಲವನ್ನೂ ದಮನಮಾಡಿ, ಸೌಂದರ್ಯದಲ್ಲಿ ಹಾಗೂ ಸ್ವಾಭಾವಿಕವಾಗಿ ಜೀವಿಸಿರುವುದರ ರಸಗ್ರಹಣ ಇವೆಲ್ಲ ಇರುವ ಮಾನವತೆಯ ದರ್ಶನ, ಇದೆಲ್ಲದರ ನಂತರ ಅದು ಬಂದಿತು. ಅದು ಉತ್ಕೃಷ್ಟ, ಗರಿಷ್ಠ ಮಟ್ಟದ ಮಾನವತೆಯುಳ್ಳ ಮಾನವತೆಯಾಗಿತ್ತು, ಆದರೆ ಸೂಕ್ಷ್ಮಾಭಿರುಚಿ–ಯದಾಗಿತ್ತು. ಅದು ಮಾನವತೆಯಾಗಿರುವುದರೊಂದಿಗೆ ತೃಪ್ತಿಯಿಂದಿತ್ತು. ಏಕೆಂದರೆ ಅದು ಸಾಮರಸ್ಯದಿಂದ ಜೀವಿಸುತ್ತದೆ ಮತ್ತು ಅದು ಹೊಸ ಸೃಷ್ಟಿಯ ಪ್ರಭಾವ–ದಡಿಯಲ್ಲಿ ಬಹುಮಟ್ಟಿಗೆ ಎಲ್ಲ ಮಾನವತೆ ಆಗಬಹುದಾದುದನ್ನು ಕುರಿತು ಬಹುಶಃ ವಚನ ನೀಡಿದ ರೀತಿಯದಾಗಿದೆ. ಅತಿಮಾನಸ ಪ್ರಜ್ಞೆ ಮಾನವತೆಗೆ ಏನನ್ನು ಮಾಡಬಹುದು ಎಂಬುದನ್ನು ತೋರಿಸಿಕೊಡುವ ರೀತಿಯಲ್ಲಿ ಅದು ಇತ್ತು ಎಂದು ನನಗನಿಸಿತು. ಮಾನವತೆ ಪ್ರಾಣಿವರ್ಗಕ್ಕೆ ಏನು ಮಾಡಿದೆ ಎಂಬುದರ ಹೋಲಿಕೆ ಕೂಡ ಇತ್ತು. ಅದು ಸ್ವಾಭಾವಿಕವಾಗಿ ಬಹಳ ಮಿಶ್ರಣಗೊಂಡದ್ದಾಗಿದೆ, ಆದರೆ ವಿಷಯಗಳನ್ನು ಪರಿಪೂರ್ಣಗೊಳಿಸಲಾಗಿದೆ. ಮನಸ್ಸಿನ ಪ್ರಭಾವದಡಿಯಲ್ಲಿ ಪಶುತ್ವ ಮತ್ತೊಂದು ವಿಷಯವಾಗಿದೆ, ಅದು ಸ್ವಾಭಾವಿಕವಾಗಿ ಮಿಶ್ರಣಗೊಂಡದ್ದಾಗಿದೆ, ಏಕೆಂದರೆ ಮನಸ್ಸೇ ಅಪೂರ್ಣವಾದದ್ದಾಗಿತ್ತು. ಅದೇ ರೀತಿಯಲ್ಲಿ ಸಮತೋಲನ–ವನ್ನು ಸರಿಯಾಗಿ ಕಾಯ್ದುಕೊಂಡ ಜನರಲ್ಲಿ ಸಾಮರಸ್ಯವುಳ್ಳ ಮಾನವತೆಯ ಉದಾಹರಣೆಗಳಿವೆ ಮತ್ತು ಇದು ಮಾನವತೆ ಅತಿಮಾನಸದ ಪ್ರಭಾವದಡಿಯಲ್ಲಿ ಏನಾಗಬಹುದು ಎಂಬುದನ್ನು ತೋರಿಸಿಕೊಡುವಂತಿತ್ತು.

ಕೇವಲ, ಅದು ಬಹಳ ದೂರದ ವಿಷಯ. ಅದು ಕೂಡಲೆ ಬರುವುದೆಂದು ನೀವು ನಿರೀಕ್ಷಿಸಬಾರದು – ಅದು ಬಹಳ ದೂರದಲ್ಲಿದೆ.

ಸ್ಪಷ್ಟವಾಗಿ ಈಗಲೂ ಕೂಡ ಸಂಕ್ರಮಣದ ಅವಧಿಯಿದೆ. ಅದು ಬಹಳ ಕಾಲ ಉಳಿದುಕೊಳ್ಳಲಿದೆ ಎಂಬುದು ವೇದನೆಯ ವಿಷಯ. ಕೆಲವೊಮ್ಮೆ ವೇದನೆಯಿಂದ ಕೂಡಿರುವ ಪ್ರಯತ್ನ (ಬಹಳಷ್ಟು ಸಲ ವೇದನೆಯಿಂದ ಕೂಡಿರುತ್ತದೆ) ಸಿದ್ಧಿಸಿ–ಕೊಳ್ಳಬೇಕಾದ ಗುರಿಯ ಸ್ಪಷ್ಟ ದರ್ಶನದಿಂದ ಸರಿದೂಗಿಸಿಕೊಳ್ಳುತ್ತದೆ (compensated), ಆ ದರ್ಶನದ ಪ್ರಕಾರ ಗುರಿಯನ್ನು ಸಿದ್ಧಿಸಿಕೊಳ್ಳಲಾಗುವುದು, ಹೌದು ಅದೊಂದು ವಾಗ್ದಾನ, ನಿಶ್ಚಿತತೆ, ಆದರೆ ಅದು ಮಾನಸಿಕ ಜೀವನದ ಎಲ್ಲ

ದೋಷವನ್ನು, ಎಲ್ಲ ವಿಕೃತಿಯನ್ನು, ಎಲ್ಲ ಕುರೂಪವನ್ನು ನಿವಾರಿಸುವ ಸಾಮರ್ಥ್ಯವುಳ್ಳ ಏನೋ ಒಂದಾಗಿರುತ್ತದೆ – ಮತ್ತು ಆಗ ಬಹಳ ಸಂತೋಷ–ದಿಂದಿರುವ, ಮಾನವನಾಗಿರುವುದರಲ್ಲಿ ಸಂತೃಪ್ತಿಯಿಂದಿರುವ, ಮಾನವನಲ್ಲದೆ ಬೇರೆ ಏನೂ ಆಗುವುದರ ಆವಶ್ಯಕತೆಯ ಭಾವನೆಯನ್ನು ತಂದುಕೊಳ್ಳ–ದಂತಿರುತ್ತದೆ, ಆದರೆ ಅದು ಮಾನವ ಸೌಂದರ್ಯ ಹಾಗೂ ಸಾಮರಸ್ಯಗಳನ್ನು ಹೊಂದಿರುತ್ತದೆ.

ಅದು ಬಹಳ ಮೋಹಕವಾಗಿತ್ತು, ನಾನು ಅದರಲ್ಲಿಯೇ ಜೀವಿಸಿದ್ದೇನೆ ಎನ್ನುವ ಹಾಗಿತ್ತು. ಎಲ್ಲ ವೈರುಧ್ಯಗಳು ಮಾಯವಾಗಿದ್ದವು. ನಾನು ಆ ಪರಿ–ಪೂರ್ಣತೆಯಲ್ಲಿ ಜೀವಿಸುತ್ತಿದ್ದ ಹಾಗಿತ್ತು. ಅದು ಬಹುಮಟ್ಟಿಗೆ ಅತಿಮಾನಸ ಪ್ರಜ್ಞೆ, ಸಾಧ್ಯವಿದ್ದಷ್ಟು ಪರಿಪೂರ್ಣವಾಗಿರುವ ಮಾನವತೆಗಾಗಿ, ಕಲ್ಪಿಸಿಕೊಂಡಿರುವ ಆದರ್ಶದ ಹಾಗಿತ್ತು. ಅದು ಬಹಳ ಒಳ್ಳೆಯದಾಗಿತ್ತು.

ಮತ್ತು ಇದು ಶ್ರೇಷ್ಠಮಟ್ಟದ ವಿಶ್ರಾಂತಿಯನ್ನು ತರುತ್ತದೆ. ಅಲ್ಲಿ ಬೇಗುದಿ, ಘರ್ಷಣೆ, ಅಸಹನೆ ಇವೆಲ್ಲ ಮಾಯವಾಗಿದ್ದವು. ಅದೆಲ್ಲವೂ ಮಾಯವಾಗಿತ್ತು.

**– ಶ್ರೀಮಾತೆ**

*

## ಶ್ರೀಮಾತೆ : ಭಗವಂತನ ದೈವೀ ಪ್ರಜ್ಞೆ ಹಾಗೂ ದೈವೀ ಶಕ್ತಿ

(13/52) **ಪ್ರಶ್ನೆ :** *ಶ್ರೀಮಾತೆಯವರೆ, ಪರಮೋಚ್ಚ ಪ್ರಭು ಜಗತ್ತನ್ನು ನಿರ್ಮಾಣ ಮಾಡಿರೆಂದು ನಿಮಗೆ ಹೇಳಿದಾಗ ಏನು ಮಾಡಬೇಕಾಗಿದೆ ಎಂಬುದನ್ನು ಹೇಗೆ ತಿಳಿದುಕೊಂಡಿರಿ?*

**ಶ್ರೀಮಾತೆ :** ಅದಕ್ಕಾಗಿ ನಾನು ಕಲಿಯಬೇಕಾದುದು ಏನೂ ಇರಲಿಲ್ಲ. ಏಕೆಂದರೆ ಪರಮೋಚ್ಚ ಪ್ರಭು ತನ್ನಲ್ಲಿಯೇ ಇಡೀ ಜಗತ್ತನ್ನು, ಜಗತ್ತಿನ ಜ್ಞಾನವನ್ನು ಮತ್ತು ಅದನ್ನು ನಿರ್ಮಿಸುವ ಸಾಮರ್ಥ್ಯವನ್ನು ಹೀಗೆ ಎಲ್ಲವನ್ನು ಒಳಗೊಂಡಿದ್ದಾನೆ. ಜಗತ್ತೊಂದು ಅಸ್ತಿತ್ವದಲ್ಲಿ ಬರಬೇಕೆಂದು ಅವನು ನಿರ್ಧರಿಸಿದಾಗ ಮೊದಲು ಅವನು ಜಗತ್ತಿನ ಬಗೆಗಿನ ಜ್ಞಾನವನ್ನು ಮತ್ತು ಅದನ್ನು ನಿರ್ಮಿಸುವ ಸಾಮರ್ಥ್ಯ–



ವನ್ನು ಹೊರತಂದನು ಮತ್ತು ಅದು ನಾನಾಗಿದ್ದೇನೆ, ನಂತರ ಜಗತ್ತನ್ನು ನಿರ್ಮಿಸಲು ನನಗೆ ಆದೇಶ ನೀಡಿದನು.

*

ಪೃಥ್ವಿಯ ಪ್ರಾರಂಭದಿಂದ ಎಲ್ಲೆಲ್ಲಿ ಮತ್ತು ಯಾವಾಗ ಪ್ರಜ್ಞೆಯ ಒಂದು ಕಿರಣವನ್ನು ಪ್ರಕಟಿಸುವ ಸಾಧ್ಯತೆಯಿದ್ದಿತೋ ಅಲ್ಲಿ ನಾನಿದ್ದೆ.

*

ಈ ಎಲ್ಲ ಅಸಂಖ್ಯಾತ, ವೈವಿಧ್ಯಮಯ ಅಂಶಗಳಲ್ಲಿ ನಾನು ಚಾಲನೆ ನೀಡುವ ದೈವೀ ಸಂಕಲ್ಪ, ಕ್ರಿಯೆ ಕೈಕೊಳ್ಳುವ ದೈವೀ ಯೋಚನೆ, ಸಿದ್ಧಿಸಿಕೊಳ್ಳುವ ದೈವೀ ಶಕ್ತಿ, ಚಾಲನೆಗೊಳಪಡಿಸಲಾದ ಭೌತದ್ರವ್ಯ ಆಗಿದ್ದೇನೆ.

*

**ಪ್ರಶ್ನೆ :** *ಶ್ರೀಮಾತೆಯವರೆ, ನಾವಿರುವ ರೀತಿಯಲ್ಲಿ ಏಕೆ ಬಂದಿರಿ? ನೀವು ನಿಜವಾಗಿ ಇರುವ ರೀತಿಯಲ್ಲೇಕೆ ಬರಲಿಲ್ಲ?*

**ಶ್ರೀಮಾತೆ :** ನಾನು ನೀವಿದ್ದ ರೀತಿಯಲ್ಲಿ ಬರದೆ ಹೋಗಿದ್ದರೆ ನಿಮಗೆ ನಾನು ಎಂದಿಗೂ ಹತ್ತಿರದವಳಾಗುತ್ತಿರಲಿಲ್ಲ, ಮತ್ತು 'ನಾನಿರುವ ರೀತಿಯಲ್ಲಿ ನೀವಾಗಿರಿ' ಎಂದು ನನಗೆ ಹೇಳಲಾಗುತ್ತಿರಲಿಲ್ಲ.

*

ನಿಮ್ಮ ಹತ್ತಿರ ಮಾತನಾಡುತ್ತಿರುವುದು ಭಗವಂತನ ನಿಷ್ಠಾವಂತ ಸೇವಕ–ನಾಗಿದೆ, ಎಲ್ಲ ಕಾಲದಿಂದ, ಪೃಥ್ವಿಯ ಪ್ರಾರಂಭದಿಂದ ಭಗವಂತನ ನಿಷ್ಠಾವಂತ ಸೇವಕನಾಗಿದೆ. ಅದು ತನ್ನ ಪ್ರಭುವಿನ ಹೆಸರಿನಲ್ಲಿ ಮಾತನಾಡಿದೆ. ಪೃಥ್ವಿ ಮತ್ತು ಮಾನವರು ಅಸ್ತಿತ್ವದಲ್ಲಿರುವವರೆಗೆ ಅಲ್ಲಿ ದೇಹವೊಂದರಲ್ಲಿ ದೈವೀ ಶಬ್ದವನ್ನು ಬೋಧಿಸಲು ಅದು ಇರುವುದು.

*

### ಪತ್ರವೊಂದಕ್ಕೆ ವಸ್ತುನಿಷ್ಠ ಉತ್ತರ

ಪರಮೋಚ್ಚ ಪ್ರಜ್ಞೆ ಈ ದೇಹದಲ್ಲಿ ಅವತರಿಸಿದ್ದರೆ ಹಾಗೂ ಪ್ರಕಟಿಸುತ್ತಿದ್ದರೆ ಜಗತ್ತಿನ ಎಲ್ಲ ನಿರಾಕರಣೆಗಳು ಅದು ಹಾಗಿರುವುದನ್ನು ತಡೆಯಲಾರವು.

ಮತ್ತು ಅದು ಹಾಗಿರದಿದ್ದರೆ, ನನ್ನ ಭೌತಿಕ ಅಸ್ತಿತ್ವವು ನಂಬಿಕೆ ಇದ್ದವರಿಗೆ ಮತ್ತು ಈ ನಂಬಿಕೆಯ ಸಹಾಯದಿಂದ, ನನ್ನ ಮೂಲಕ, ಪರಮೋಚ್ಚ ಪ್ರಜ್ಞೆಯೊಂದಿಗೆ ಸಂಪರ್ಕದಲ್ಲಿ ಪ್ರವೇಶಿಸುವವರಿಗೆ ಸ್ವಾರಸ್ಯಕರವಾಗಿರುತ್ತದೆ.

ಅಂತಹವರಿಗೆ ಮಾತ್ರ ಈ ಪ್ರಶ್ನೆಯ ಮಹತ್ವವಿದೆ, ಮತ್ತು ಇತರರು ಅದರ ಬಗ್ಗೆ ಕಾಳಜಿ ಮಾಡುವ ಆವಶ್ಯಕತೆ ಇಲ್ಲ. ಇಂತಹ ನಂಬಿಕೆಗೆ, ನಿಷ್ಕಪಟ–ವಾಗಿರುವುದು, ಪರಿಣಾಮಕಾರಿಯಾಗಿರುವುದು ಯಾವುದೇ ಪರ ಅಥವಾ ವಿರುದ್ಧ ಪ್ರಚಾರದ ಉದ್ದೇಶವಾಗಿರುವುದಿಲ್ಲ. ಅದರ (ನಂಬಿಕೆಯ) ಜನ್ಮ ಮುಕ್ತವಾದದ್ದು ಮತ್ತು ಸ್ವಯಂಪ್ರೇರಿತವಾದದ್ದು ಆಗಿರಬೇಕು. ಅದನ್ನು ಬಲ ಪ್ರಯೋಗದ ಮೂಲಕ ದೊರಕಿಸಲಾಗುವುದಿಲ್ಲ ಇಲ್ಲವೆ ನಿರಾಕರಣೆಯ ಮೂಲಕ ನಾಶ–ಮಾಡಲಾಗುವುದಿಲ್ಲ.

ಯಾವುದೇ ಬಗೆಯ ನಂಬಿಕೆ ಅಥವಾ ಮನವರಿಕೆಯ ವಿರುದ್ಧ ಘೋರವಾಗಿ ಹೋರಾಡುವ ಆವಶ್ಯಕತೆಯನ್ನು ಭಾವನೆಗೆ ತಂದುಕೊಳ್ಳುವವನು ಅದೇ ವಾಸ್ತ–ವತೆಯಿಂದಾಗಿ ಅವನ ಸತ್ತೆಯ ಒಂದು ಭಾಗ, ಅದೆಷ್ಟೇ ಚಿಕ್ಕದಾಗಿದ್ದರೂ, ಈ ಮನವರಿಕೆಯ ಪ್ರಭಾವಕ್ಕೊಳಗಾಗಿರುತ್ತದೆ ಎಂಬುದನ್ನು ಸಿದ್ಧಪಡಿಸುತ್ತದೆ. ಅದು ಹಾಗಿರುವಾಗ ಸಾಧಾರಣವಾಗಿ ಹೆಚ್ಚು ಮಹತ್ವದ್ದಾಗಿರುವ ಮತ್ತು ಬಾಹ್ಯದಲ್ಲಿರುವ ಅವನದೇ ಇನ್ನೊಂದು ಭಾಗ ನಂಬಿಕೆಯೊಂದನ್ನು ಒಪ್ಪಿಕೊಳ್ಳುವುದನ್ನು ಸಂಪೂರ್ಣವಾಗಿ ತಿರಸ್ಕರಿಸುತ್ತದೆ, ಆ ನಂಬಿಕೆ ಅವನಿಗೆ ಹೆಚ್ಚು ಅಪಾಯಕಾರಿ–ಯಾದದ್ದು ಎಂದೆನಿಸುತ್ತದೆ, ಏಕೆಂದರೆ ಅವನು ಅದಕ್ಕೆ ಹೆಚ್ಚು ಸೂಕ್ಷ್ಮ ಸಂವೇದಿ–ಯಾಗಿರುತ್ತಾನೆ ಮತ್ತು ಅದನ್ನು ಬಲವತ್ತಾದ ರೀತಿಯಲ್ಲಿ ನಿರಾಕರಿಸುವುದಕ್ಕೆ ಸಂಕಲ್ಪ ತನಗೆ ಮನವರಿಕೆ ಮಾಡಿಕೊಳ್ಳುವ ಆವಶ್ಯಕತೆಯಿಂದ ಬರುತ್ತದೆ.

ವ್ಯಕ್ತಿನಿಷ್ಠ ದೃಷ್ಟಿಕೋನದಿಂದ ನಾನು ಯಾರೆಂಬುದು ನನಗೆ ತಿಳಿದಿದೆ. ಜೀವಿಸುತ್ತಿರುವ ಈ ಜ್ಞಾನ ತನ್ನ ಮೌಲ್ಯವನ್ನು ಕೇವಲ ನನ್ನ ನಿಷ್ಕಾಪಟ್ಯದಲ್ಲಿ ಕಂಡುಕೊಳ್ಳುತ್ತದೆ ಮತ್ತು ಈ ನಿಷ್ಕಾಪಟ್ಯವನ್ನು ಕುರಿತು ಪರಮೋಚ್ಚನು ಮಾತ್ರ ತೀರ್ಪು ನೀಡುವವನಾಗಬಲ್ಲನು.

*



(13/47) ಒಂದು ವಿಷಯವನ್ನು ನಾನು ಖಂಡಿತವಾಗಿ ಹೇಳಬಲ್ಲೆ, ಅದು ನಾನು ಯಾರೆಂಬುದನ್ನು ಕುರಿತಾಗಿದೆ. ಶ್ರೀ ಅರವಿಂದರು ಕೂಡ ಅದನ್ನು ತಿಳಿದು–ಕೊಂಡಿದ್ದರು ಮತ್ತು ಸಾರಿ ಹೇಳಿದರು. ಇಡೀ ಮಾನವತೆಯ ಸಂಶಯದಿಂದ ಈ ವಾಸ್ತವತೆಯಲ್ಲಿ ಏನನ್ನೂ ಬದಲು ಮಾಡಲು ಸಾಧ್ಯವಿಲ್ಲ. **– ಶ್ರೀಮಾತೆ**

*

**ಅವಶ್ಯವಾದ ಸಾಮರ್ಥ್ಯವಿರುವ ಪ್ರಜ್ಞಾಪೂರ್ಣ ಸಹಾಯ**

(15/393–94) ಸತ್ಯ ಹೇಳುವುದಾದರೆ ಇದೀಗ ಪೃಥ್ವಿಯ ಮೇಲೆ ಒಂದು ಸದವಕಾಶವಿದೆ, ಅಂತಹದು ಸಾವಿರಾರು ವರ್ಷಗಳ ನಂತರ ತನ್ನನ್ನು ತೋರಿಸು–ತ್ತದೆ. ಅದು ಅವಶ್ಯವಾದ ಸಾಮರ್ಥ್ಯವಿರುವ ಪ್ರಜ್ಞಾಪೂರ್ಣ ಸಹಾಯವಿರು–ವುದಾಗಿದೆ. ಕರ್ಮವೊಂದರ ಪರಿಣಾಮವನ್ನು ಅಳಿಸಿಬಿಡಲು ಯಾವುದಕ್ಕೂ ಸಾಮರ್ಥ್ಯವಿರುವುದಿಲ್ಲ. ಶುದ್ಧೀಕರಣಗೊಳಿಸುವ ಕ್ರಿಯೆಗಳಿಂದ ಮಾತ್ರ ಕರ್ಮದ ಪರಿಣಾಮವನ್ನು ಪರಿವರ್ತನೆಗೆ ಒಳಪಡಿಸಬಹುದು, ನಿಶ್ಶೇಷ ಮಾಡಬಹುದು, ಅಳಿಸಿ ಹಾಕಬಹುದು ಎಂದು ಒಂದು ಕಾಲದಲ್ಲಿ ನಂಬಲಾಗಿತ್ತು. ಆದರೆ ಮುಕ್ತಿ ನೀಡುವ ವಿಧಾನದ ಎಲ್ಲ ಹಂತಗಳ ಮೂಲಕ ಸಾಗಿ ಹೋಗುವ ಆವಶ್ಯಕತೆ ಇಲ್ಲದೆ ಅತಿಮಾನಸದ ಸಾಮರ್ಥ್ಯದ ಮೂಲಕ ಇದನ್ನು ಮಾಡಬಹುದು. **– ಶ್ರೀಮಾತೆ**

*

## ಶ್ರೀಮಾತೆಯವರು ದೇಹಧಾರಣೆ ಮಾಡಿದುದರ ಉದ್ದೇಶ

(25/48–50, 40–41) ಅವರು ದೇಹಧಾರಣೆ ಮಾಡಿದುದು ಪೃಥ್ವೀಪ್ರಜ್ಞೆ ಅತಿ–ಮಾನಸವನ್ನು ಸ್ವೀಕರಿಸುವುದಕ್ಕೆ ಮತ್ತು ಅದು ಸಾಧ್ಯವಾಗುವಂತೆ ಮಾಡಲು ಅವಶ್ಯವಾದ ಮೊದಲ ಪರಿವರ್ತನೆಗೆ ಒಳಗಾಗುವುದಕ್ಕೆ ಒಂದು ಸದವಕಾಶವಾಗಿದೆ. ನಂತರ ಅಲ್ಲಿ ಅತಿಮಾನಸದಿಂದ ಇನ್ನೂ ಹೆಚ್ಚಿನ ಪರಿವರ್ತನೆಯಾಗುವುದು, ಆದರೆ ಇಡೀ ಪೃಥ್ವೀಪ್ರಜ್ಞೆ ಅತಿಮಾನಸೀಕರಣಗೊಳ್ಳುವುದಿಲ್ಲ – ಮನುಷ್ಯ ಮನಸ್ಸನ್ನು ಪ್ರತಿನಿಧಿಸಿದ ಹಾಗೆ ಮೊದಲು ಅತಿಮನಸ್ಸನ್ನು ಪ್ರತಿನಿಧಿಸುವ ಒಂದು ಕುಲ ಬರುತ್ತದೆ.

*

ಶ್ರೀಮಾತೆಯವರು ಅತಿಮಾನಸವನ್ನು ಕೆಳಗಿಳಿಸಿ ತರುವುದಕ್ಕಾಗಿ ಬರುತ್ತಾರೆ ಮತ್ತು ಅದರ ಅವರೋಹಣ ಇಲ್ಲಿ ಅವರ ಪೂರ್ಣ ಪ್ರಕಟಣೆ ಸಾಧ್ಯವಾಗುವಂತೆ ಮಾಡುತ್ತದೆ.

*

ಭಗವಂತ ಮಾನವತೆಯ ರೂಪ ಧರಿಸಿರುತ್ತಾನೆ, ದೈವೀ ಮಾರ್ಗದಲ್ಲಿ ಹೆಜ್ಜೆ ಇರಿಸಿ ಮುಂದೆ ಸಾಗಲು ಮತ್ತು ಅದನ್ನು ಮಾನವರಿಗೆ ತೋರಿಸಿಕೊಡಲು ಅವನು ಮಾನವ ಸ್ವಭಾವದ ಬಾಹ್ಯ ಸ್ವರೂಪವನ್ನು ಧಾರಣಮಾಡಿರುತ್ತಾನೆ, ಆದರೆ ಅವನು ಭಗವಂತನಾಗಿರುವುದು ನಿಂತುಹೋಗುವುದಿಲ್ಲ. ಅದು ಬೆಳೆಯುತ್ತಿರುವ ದೈವೀ ಪ್ರಜ್ಞೆಯ ಪ್ರಕಟಣೆಯಾಗುವುದಾಗಿರುತ್ತದೆ, ಮಾನವ ದೈವಿಕವಾಗಿ ಪರಿವರ್ತನೆ ಹೊಂದುವುದಾಗಿರುವುದಿಲ್ಲ. ಬಾಲ್ಯದಲ್ಲಿಯೇ ಶ್ರೀಮಾತೆಯವರು ಮಾನವ ಸ್ತರದ ಮೇಲಿನ ಹಂತದಲ್ಲಿದ್ದರು.

*

ವಿಶ್ವದಲ್ಲಿ, ವ್ಯಕ್ತಿಯಲ್ಲಿ ಕಾರ್ಯಮಾಡುವ ಒಂದು ದೈವೀಶಕ್ತಿಯಿದೆ ಮತ್ತು ಅದು ವಿಶ್ವ, ವ್ಯಕ್ತಿಗಳಾಚೆಗೂ ಇದೆ. ಶ್ರೀಮಾತೆಯವರು ಅದೆಲ್ಲವನ್ನೂ ಪ್ರತಿ–ನಿಧಿಸುತ್ತಾರೆ. ಆದರೆ ಇಲ್ಲಿ ಅವರು ದೇಹದಲ್ಲಿದ್ದುಕೊಂಡು ಭೌತಿಕ ಜಗತ್ತಿನಲ್ಲಿ ಇಲ್ಲಿಯವರೆಗೆ ಅಭಿವ್ಯಕ್ತವಾಗದೆ ಇದ್ದುದನ್ನು ಕೆಳಗಿಳಿಸಿ ತರಲು, ಇಲ್ಲಿಯ ಜೀವನವನ್ನು ಪರಿವರ್ತಿಸಲು ಕಾರ್ಯಮಾಡುತ್ತಿದ್ದಾರೆ – ಇಲ್ಲಿ ಆ ಉದ್ದೇಶಕ್ಕಾಗಿ ಕಾರ್ಯಮಾಡುತ್ತಿರುವ ದೈವೀಶಕ್ತಿಯೆಂದು ನೀವು ಅವರನ್ನು ಗೌರವಿಸಬೇಕು. ದೇಹದಲ್ಲಿ ಅವರು ಆ ದೈವೀಶಕ್ತಿಯಾಗಿದ್ದಾರೆ, ಆದರೆ ಅವರ ಪ್ರಜ್ಞೆಯಲ್ಲಿ ಭಗವಂತನ ಉಳಿದೆಲ್ಲ ಮುಖಗಳೊಂದಿಗೆ ತಾದಾತ್ಮ್ಯ ಹೊಂದಿದ್ದಾರೆ.

*

ವಿಶ್ವವ್ಯಾಪಿ (cosmic) ದೈವೀ ಸಾಮರ್ಥ್ಯದ ಕಾರ್ಯ ವಿಶ್ವವನ್ನು ಹಾಗೂ ಅದರ ನಿಯಮವನ್ನು ಪಾಲಿಸಿಕೊಂಡು ಬರುವುದಾಗಿದೆ. ಹೆಚ್ಚಿನ ಪರಿವರ್ತನೆ ವಿಶ್ವದ ಮೇಲ್ಗಡೆಗಿರುವ ವಿಶ್ವಾತೀತವಾದುದರಿಂದ ಬರುತ್ತದೆ. ವಿಶ್ವಾತೀತ ದೈವೀಕೃಪೆಯನ್ನು ಕಾರ್ಯರೂಪದಲ್ಲಿ ತರುವುದಕ್ಕಾಗಿ ದೇಹಧಾರಣೆ ಮಾಡಿದ ಶ್ರೀಮಾತೆಯವರು ಅಲ್ಲಿದ್ದಾರೆ.

*



ತಮ್ಮ ವಿಶ್ವಂಭರ (universal) ಕ್ರಿಯೆಯಲ್ಲಿ ಜಗನ್ಮಾತೆ ವಸ್ತು–ವಿಷಯಗಳ ನಿಯಮದ ಪ್ರಕಾರ ಕಾರ್ಯಮಾಡುತ್ತಾರೆ – ದೇಹಧಾರಣೆ ಮಾಡಿದ ಅವರ ಭೌತಿಕ ಕ್ರಿಯೆಯಲ್ಲಿ ದೈವೀಕೃಪೆಯನ್ನು ಪಡೆಯುವ ಸತತ ಸದವಕಾಶವಿರುತ್ತದೆ – ಆ ಕಾರಣಕ್ಕಾಗಿ ಜಗನ್ಮಾತೆ ದೇಹಧಾರಣೆ ಮಾಡುವುದಿರುತ್ತದೆ.

*

ಅತಿಮಾನಸ ಬದಲಾವಣೆ ವಿಧಿಸಲಾದ ವಿಷಯ ಮತ್ತು ಪೃಥ್ವೀಪ್ರಜ್ಞೆಯ ಉತ್ಕ್ರಾಂತಿಯಲ್ಲಿ ಅನಿವಾರ್ಯವಾದದ್ದು, ಏಕೆಂದರೆ ಅದರ ಊರ್ಧ್ವಮುಖ ಆರೋಹಣ ಕೊನೆಗೊಂಡಿಲ್ಲ ಮತ್ತು ಮನಸ್ಸು ಕೊನೆಯ ಶಿಖರವಲ್ಲ. ಆದರೆ ಆ ಬದಲಾವಣೆ ಬರುವುದಕ್ಕಾಗಿ, ರೂಪ ತಾಳುವುದಕ್ಕಾಗಿ, ತಾಳಿಕೊಳ್ಳುವುದಕ್ಕಾಗಿ ಕೆಳಗಿನಿಂದ ಕರೆ ಕೊಡುವುದರ ಆವಶ್ಯಕತೆ ಇದೆ, ಆ ಕರೆ ಕೊಡುವಾಗ ದೈವೀ ಪ್ರಕಾಶ ಬಂದ ಸಮಯದಲ್ಲಿ ಅದನ್ನು ಗುರುತಿಸುವ ಹಾಗೂ ನಿರಾಕರಿಸದಿರುವ ಸಂಕಲ್ಪವಿರುವುದರ ಆವಶ್ಯಕತೆ ಇದೆ, ಮತ್ತು ಅದಕ್ಕೆ ಮೇಲ್ಗಡೆಗಿರುವ ಪರಮೋಚ್ಚನು ಅನುಮತಿ ನೀಡುವುದರ ಆವಶ್ಯಕತೆ ಇದೆ. ಅನುಮತಿ ನೀಡುವುದರ ಹಾಗೂ ಕರೆಕೊಡುವುದರ ನಡುವೆ ಮಾಧ್ಯಮವಾಗಿರುವುದು ಶ್ರೀಮಾತೆಯವರ ಸಾನ್ನಿಧ್ಯ ಹಾಗೂ ಸಾಮರ್ಥ್ಯ, ಮನುಷ್ಯರು ಕೈಕೊಳ್ಳಬಹುದಾದ ಯಾವುದೇ ಬಗೆಯ ತಪಸ್ಸಿನಿಂದಲ್ಲ, ಆದರೆ ಶ್ರೀಮಾತೆಯವರ ದೈವೀ ಸಾಮರ್ಥ್ಯ ಮಾತ್ರ ಮುಚ್ಚಳವನ್ನು ತೆಗೆದು ಹಾಕಿ, ಹೊದಿಕೆಯನ್ನು ಹರಿದುಹಾಕಿ, ಪಾತ್ರೆಗೆ ಆಕಾರಕೊಟ್ಟು, ಮಬ್ಬು, ಮಿಥ್ಯೆ, ಮರಣ ಹಾಗೂ ವೇದನೆಗಳಿರುವ ಈ ಜಗತ್ತಿನಲ್ಲಿ ದೈವೀ ಪ್ರಕಾಶ, ದೈವೀ ಸತ್ಯ ಹಾಗೂ ಅಮರನ ದಿವ್ಯಾನಂದವನ್ನು ಕೆಳಗಿಳಿಸಿ ತರಲು ಸಾಧ್ಯ. **– ಶ್ರೀ ಅರವಿಂದರು**

*

(25/65) ಎಲ್ಲ ವಸ್ತು–ವಿಷಯಗಳ ಮಾತೆಯಾಗಿರುವ ಜಗನ್ಮಾತೆ ಭಗವಂತನ ದೈವೀ ಪ್ರಜ್ಞೆ ಹಾಗೂ ದೈವೀ ಸಾಮರ್ಥ್ಯವಾಗಿದ್ದಾಳೆ. **– ಶ್ರೀ ಅರವಿಂದರು**

*

## ಶ್ರೀಮಾತೆಯವರ ಸಾಮರ್ಥ್ಯಗಳು ಹಾಗೂ ವ್ಯಕ್ತಿವಿಶಿಷ್ಟತೆಗಳು

(25/62) ದೈವೀ 'ಸಾಮರ್ಥ್ಯ' ಶಬ್ದವನ್ನು ವಿಶ್ವವ್ಯಾಪಿ ಕ್ಷೇತ್ರದಲ್ಲಿ ಪ್ರಜ್ಞಾಪೂರ್ಣ ಸಾಮರ್ಥ್ಯವನ್ನು ಪ್ರಯೋಗಿಸುವ ಯಾವುದಕ್ಕಾದರೂ ಇಲ್ಲವೆ ಯಾರಿಗಾದರೂ ಅನ್ವಯಿಸಬಹುದು, ಮತ್ತು ಅದಕ್ಕೆ ಜಗತ್ತಿನ ಚಲನೆಯ ಮೇಲೆ ಇಲ್ಲವೆ ಅದರಲ್ಲಿರುವ ಕೆಲವೊಂದು ಚಲನೆಯ ಮೇಲೆ ಅಧಿಕಾರವಿರುತ್ತದೆ. ಆದರೆ ನೀನು ನಾಲ್ಕು ದೇವಿಯರ ಬಗ್ಗೆ ಅಂದರೆ ಮಹೇಶ್ವರಿ, ಮಹಾಕಾಲಿ, ಮಹಾಲಕ್ಷ್ಮಿ, ಮಹಾಸರಸ್ವತಿ ಇವರ ಬಗ್ಗೆ ಹೇಳುತ್ತಿರುವಿ. ಇವರು ಶಕ್ತಿದೇವತೆಗಳು, ಪರಮೋಚ್ಚ ಪ್ರಜ್ಞೆ ಹಾಗೂ ಶಕ್ತಿಯಾದ ಜಗನ್ಮಾತೆಯ ವಿಭಿನ್ನ ಸಾಮರ್ಥ್ಯಗಳ ಪ್ರಕಟಣೆಯಾಗಿದ್ದಾರೆ, ಇವರ ಮೂಲಕ ಜಗನ್ಮಾತೆ ಜಗತ್ತನ್ನು ಆಳುತ್ತಾಳೆ, ಜಗತ್ತಿನಲ್ಲಿ ಕ್ರಿಯೆ ಕೈಕೊಳ್ಳುತ್ತಾಳೆ. ಅವರು ಅದೇ ವೇಳೆಗೆ ದೈವೀ ವ್ಯಕ್ತಿವಿಶಿಷ್ಟತೆಯುಳ್ಳವ–ರಾಗಿದ್ದಾರೆ, ಏಕೆಂದರೆ ಪ್ರತಿಯೊಬ್ಬರು ದೇವನ ಗುಣಲಕ್ಷಣಗಳನ್ನು, ವ್ಯಕ್ತಿಗತ ಪ್ರಜ್ಞಾ–ರೂಪಗಳನ್ನು ಪ್ರಕಟಿಸುವ ಸತ್ತೆಯಾಗಿದ್ದಾರೆ. ಎಲ್ಲ ಶ್ರೇಷ್ಠ ದೇವರುಗಳು ಈ ರೀತಿಯಾಗಿ ಏಕೈಕ ದೈವೀ ಪ್ರಜ್ಞೆಯಾಗಿರುವ ಭಗವಂತನ ವ್ಯಕ್ತಿವಿಶಿಷ್ಟತೆಗಳಾಗಿದ್ದಾರೆ, ಹಲವಾರು ವ್ಯಕ್ತಿವಿಶಿಷ್ಟತೆಗಳ ರೂಪದಲ್ಲಿ ಲೀಲೆ ನಡೆಸುತ್ತಾರೆ, 'ಏಕಂ ಸತ್ ಬಹುಧಾ', ಮಾನವ ಸತ್ತೆಯಲ್ಲಿಯೂ ಕೂಡ ಹಲವಾರು ವ್ಯಕ್ತಿವಿಶಿಷ್ಟತೆಗಳಿರುತ್ತವೆ, ಮೊದಲು ಕಲ್ಪನೆ ಮಾಡಿಕೊಂಡಿರುತ್ತಿದ್ದ ರೀತಿಯಲ್ಲಿ ಒಂದೇ ವ್ಯಕ್ತಿವಿಶಿಷ್ಟತೆ ಇರುವುದಿಲ್ಲ, ಏಕೆಂದರೆ ಎಲ್ಲ ಪ್ರಜ್ಞೆ ಒಂದೇ ವೇಳೆಗೆ ಏಕ ಹಾಗೂ ಅನೇಕ ಆಗಬಲ್ಲದು. "ದೈವೀ ಸಾಮರ್ಥ್ಯಗಳು, ದೈವೀ ವ್ಯಕ್ತಿವಿಶಿಷ್ಟತೆಗಳು" ಸರಳ ರೀತಿಯಲ್ಲಿ ಒಂದೇ ಸತ್ತೆಯ ಹಲವಾರು ಮುಖಗಳನ್ನು ವರ್ಣಿಸುತ್ತವೆ. ದೈವೀ ಸಾಮರ್ಥ್ಯ: ನೀನು ಹೇಳುವ ಹಾಗೆ ಅವಶ್ಯವಾಗಿ ಅವ್ಯೆಯಕ್ತಿವಾಗಿರಬೇಕಿಲ್ಲ, ನಿಶ್ಚಿತವಾಗಿ ಅದು ಅವ್ಯಕ್ತವಾಗಿರುವುದಿಲ್ಲ – ತದ್ವಿರುದ್ಧವಾಗಿ ಅದು ಭಗವಂತನ ದೈವೀ ಪ್ರಕಟಣೆಯ ಜಗತ್ತುಗಳಲ್ಲಿ ಕಾರ್ಯ ಮಾಡುವ ಅವನ ಪ್ರಕಟಣೆ–ಯಾಗಿರುತ್ತದೆ.

**– ಶ್ರೀ ಅರವಿಂದರು**

*



## ಅವಿದ್ಯೆ ಮತ್ತು ಮಿಥ್ಯೆ ಎಂದರೇನು?

(25/61) ಅವಿದ್ಯೆ (Ignorance) ಎಂದರೆ ಪ್ರತ್ಯೇಕಗೊಳಿಸುವ ಪ್ರಜ್ಞೆ ಮತ್ತು ಅದರಿಂದ ಪ್ರವಹಿಸುವ ಅಹಂಮನ್ಯ ಮನಸ್ಸು ಹಾಗೂ ಜೀವನ, ಹಾಗೂ ಪ್ರತ್ಯೇಕಗೊಳಿಸುವ ಪ್ರಜ್ಞೆಗೆ, ಅಹಂಮನ್ಯ ಮನಸ್ಸಿಗೆ ಹಾಗೂ ಜೀವನಕ್ಕೆ ಸ್ವಾಭಾವಿಕ–ವಾದದ್ದೆಲ್ಲವೂ ಆಗಿದೆ. ಈ ಅವಿದ್ಯೆ ಒಂದು ಚಲನೆಯ ಪರಿಣಾಮ: ಆ ಚಲನೆಯಿಂದ ವಿಶ್ವವ್ಯಾಪಿ ಬೌದ್ಧಿಕತೆ ತನ್ನನ್ನು ಅತಿಮಾನಸ (ದೈವೀ ರಹಸ್ಯ ಜ್ಞಾನ)ದಿಂದ ತನ್ನನ್ನು ಪ್ರತ್ಯೇಕಗೊಳಿಸಿಕೊಂಡಿತು ಮತ್ತು ದೈವೀ ಸತ್ಯವನ್ನು ಕಳೆದುಕೊಂಡಿತು – ಹೀಗೆ ಸತ್ತೆಯ ಸತ್ಯ, ದೈವೀಪ್ರಜ್ಞೆಯ ಸತ್ಯ, ಶಕ್ತಿಯ ಸತ್ಯ, ಕ್ರಿಯೆಯ ಸತ್ಯ, ದಿವ್ಯಾನಂದದ ಸತ್ಯ ಇವೆಲ್ಲವುಗಳನ್ನು ಕಳೆದುಕೊಂಡಿತು, ಪರಿಣಾಮವಾಗಿ ದೈವೀ ರಹಸ್ಯ ಜ್ಞಾನ ಸೃಷ್ಟಿಸಿರುವ ಸಮಗ್ರ ಸತ್ಯವಿರುವ, ದೈವೀ ಸಾಮರಸ್ಯವಿರುವ ಜಗತ್ತಿನ ಬದಲಾಗಿ ನಿಮ್ನತರ ವಿಶ್ವವ್ಯಾಪಿ ಬೌದ್ಧಿಕತೆಯ ಅರ್ಧಸತ್ಯಗಳ ಆಧಾರ ಹೊಂದಿದ ಜಗತ್ತು ನಮ್ಮದಾಗಿದೆ, ಅದರಲ್ಲಿ ಎಲ್ಲವೂ ಅರ್ಧಸತ್ಯ, ಅರ್ಧ ದೋಷಗಳನ್ನು ಹೊಂದಿದೆ. ಇದರಿಂದಾಗಿಯೆ ಶಂಕರಾ–ಚಾರ್ಯರಂತಹ ಪ್ರಾಚೀನ ಚಿಂತಕರು ಹಿಂದಿರುವ ಶ್ರೇಷ್ಠ ದೈವೀ ಸತ್ಯವನ್ನು ಗ್ರಹಿಸದೆ ಮಾಯೆಯೆಂದು ದೂಷಿಸಿ ಅದು ಭಗವಂತನ ಶ್ರೇಷ್ಠತರ ಸೃಜನಾತ್ಮಕ ಶಕ್ತಿಯಾಗಿದೆಯೆಂದು ಯೋಚಿಸಿದರು. ಈ ಸೃಷ್ಟಿಯ ಪ್ರಜ್ಞೆಯಲ್ಲಿರುವುದೆಲ್ಲವೂ ಸೀಮಿತವಾಗಿದೆ ಇಲ್ಲವೆ ಸಮಗ್ರ ದೈವೀ ಸತ್ಯದಿಂದ ಬೇರ್ಪಟ್ಟು ವಿರೂಪಗೊಂಡಿದೆ; ದೈವೀ ಸತ್ಯವೆಂದು ಅದು ಗ್ರಹಿಸಿರುವುದೂ ಕೂಡ ಅರ್ಧ ಜ್ಞಾನವಾಗಿರುತ್ತದೆ, ಆದ್ದರಿಂದ ಅದನ್ನು ಅವಿದ್ಯೆಯೆಂದು ಕರೆಯಲಾಗಿದೆ.

ಇನ್ನೊಂದೆಡೆಗೆ ಮಿಥ್ಯೆ ಈ ಅವಿದ್ಯೆಯಲ್ಲ, ಆದರೆ ಅದರ ಕೊನೆಯ ಪರಿಣಾಮವಾಗಿದೆ. ಅದು ಆಸುರೀ ಸಾಮರ್ಥ್ಯವೊಂದರಿಂದ ಸೃಷ್ಟಿಯಾಗಿದೆ, ಅದು ದೈವೀ ಸತ್ಯದಿಂದ ಬೇರೆಯಾಗಿದೆ, ಆ ಕಾರಣದಿಂದಾಗಿ ಜ್ಞಾನದಲ್ಲಿ ಸೀಮಿತವಾಗಿದೆ, ಮತ್ತು ದೋಷಕ್ಕೆ ತೆರೆದುಕೊಂಡಿದೆ, ಅಷ್ಟೇ ಅಲ್ಲ ಸತ್ಯದ ವಿರುದ್ಧ ಬಂಡಾಯ–ವೇಳುತ್ತದೆ ಇಲ್ಲವೆ ಸತ್ಯವನ್ನು ವಿರೂಪಗೊಳಿಸಲೆಂದೇ ಹಿಡಿದುಕೊಳ್ಳುತ್ತದೆ. ಈ ಸಾಮರ್ಥ್ಯ, ಅಂಧಕಾರದ ಆಸುರೀ ಶಕ್ತಿ ಇಲ್ಲವೆ ರಾಕ್ಷಸೀ ಮಾಯಾ ತನ್ನದೇ ವಿರೂಪಗೊಂಡ ಪ್ರಜ್ಞೆ ನಿಜವಾದ ಜ್ಞಾನವೆಂದು ಮತ್ತು ಅದರ ಉದ್ದೇಶಪೂರ್ವಕ

ವಿರೂಪಗೊಳಿಸುವಿಕೆ ಇಲ್ಲವೆ ಹಿಂದು–ಮುಂದು ಮಾಡುವಿಕೆಗಳು ವಸ್ತು–ವಿಷಯಗಳನ್ನು ಕುರಿತಾಗಿರುವ ನಿಜವಾದ ಹೇಳಿಕೆಗಳೆಂದು ಮುಂದಿರಿಸುತ್ತದೆ. ಈ ವಿರೂಪಗೊಂಡ ಹಾಗೂ ವಿರೂಪಗೊಳಿಸುವ ಪ್ರಜ್ಞೆಯ ಸಾಮರ್ಥ್ಯಗಳನ್ನು, ವ್ಯಕ್ತಿವಿಶಿಷ್ಟತೆಗಳನ್ನು ವಿರೋಧಿ ಶಕ್ತಿಗಳೆಂದು, ವಿರೋಧೀ ಸತ್ತೆಗಳೆಂದು ಕರೆಯು–ತ್ತೇವೆ. ಅವಿದ್ಯೆಯ ಮೂಲಸಾಮಗ್ರಿಯ ಮೂಲಕ ಸೃಷ್ಟಿಯಾದ ಈ ವಿರೂಪ–ಗಳನ್ನು ವಸ್ತು–ವಿಷಯಗಳ ಸತ್ಯವೆಂದು ಮುಂದಿರಿಸಿದಾಗ ಅದು ಮಿಥ್ಯೆಯಾ–ಗಿರುತ್ತದೆ, ಯೋಗದ ಅರ್ಥದಲ್ಲಿ ಮಿಥ್ಯೆ, ಮೋಹ.

– ಶ್ರೀ ಅರವಿಂದರು

*

## ಶ್ರೀಮಾತೆಯವರ ಸಾಮರ್ಥ್ಯ ಒಂದೇ ವೇಳೆಗೆ ವಿಮೋಚನೆ–ಗೊಳಿಸುವಂತಹದು ಹಾಗೂ ಕ್ರಿಯಾ ಶಕ್ತಿಯೂ ಆಗಿರುತ್ತದೆ.

(25/68) ವಿಶ್ವವ್ಯಾಪಿ ದೈವೀಶಕ್ತಿ ಎಲ್ಲವನ್ನೂ ಕಾರ್ಯಗತಗೊಳಿಸುತ್ತದೆ ಮತ್ತು ವಿಶ್ವವ್ಯಾಪಿ ಆತ್ಮ (ವಿರಾಟ ಪುರುಷ) ಅದರ ಕಾರ್ಯಕ್ಕೆ ಆಧಾರ ನೀಡುತ್ತದೆ. ವಿಶ್ವವ್ಯಾಪಿ ದೈವೀಶಕ್ತಿ ಅವಿದ್ಯೆಯ ಪರಿಸ್ಥಿತಿಗಳಲ್ಲಿ ಕಾರ್ಯಮಾಡುತ್ತದೆ, ಅದು ನಿಮ್ಮ ಸ್ವಭಾವವಾಗಿರುವಂತೆ ತೋರಿಬರುತ್ತದೆ ಮತ್ತು ನಿಮ್ಮ ಸ್ವಭಾವ ನಿಮ್ಮಿಂದ ತಪ್ಪು ಕಾರ್ಯಗಳನ್ನು ಮಾಡಿಸುತ್ತದೆ. ನೀವೇ ಸ್ವತಃ ಅದಕ್ಕಿಂತ ಒಳ್ಳೆಯದಾದ ಏನನ್ನಾದರೂ ಬಯಸದೆ ಇರುವವರೆಗೆ ಭಗವಂತ ಈ ಶಕ್ತಿಗಳ ಲೀಲೆಗೆ ಅನುವು ಮಾಡಿಕೊಡುತ್ತಾನೆ. ನೀನು ಒಬ್ಬ ಸಾಧಕನಾಗಿದ್ದರೆ, ಆಗ ನಿಮ್ಮ ಸ್ವಭಾವದ ಲೀಲೆಯನ್ನು ಒಪ್ಪಿಕೊಳ್ಳುವುದಿಲ್ಲ, ಬದಲಾಗಿ ಶ್ರೀಮಾತೆಯವರತ್ತ ಹೊರಳುವಿ ಮತ್ತು ನಿಮ್ಮ ಸ್ವಭಾವದ ಸ್ಥಾನದಲ್ಲಿ ಅವರಿದ್ದು ಕಾರ್ಯಮಾಡಲಿ ಎಂದು ಕೇಳಿಕೊಳ್ಳುವಿ ನಿನ್ನ ಸತ್ತೆಯ ಎಲ್ಲ ಭಾಗಗಳಲ್ಲಿ ಪೂರ್ತಿಯಾಗಿ ಶ್ರೀಮಾತೆಯವರತ್ತ ಕೇವಲ ಅವರತ್ತ ಮಾತ್ರ ಹೊರಳಿದಾಗ ಭಗವಂತ ಎಲ್ಲ ಕಾರ್ಯಗಳನ್ನು ನಿನ್ನ ಮೂಲಕ ಮಾಡುತ್ತಾನೆ.

*



. . . ಈಶ್ವರೀ ಶಕ್ತಿ, ದೈವೀ ಪ್ರಜ್ಞಾ–ಶಕ್ತಿ ಮತ್ತು ಜಗನ್ಮಾತೆಯಾದವಳು ಏಕೈಕ–ನಾದ ಸನಾತನ ಹಾಗೂ ಪ್ರಕಟಗೊಂಡ ಅನೇಕತೆ ಇವುಗಳ ನಡುವೆ ಮಧ್ಯಸ್ಥಿಕೆ ನಡೆಸುವವಳಾಗುತ್ತಾಳೆ. ಒಂದೆಡೆ ಏಕೈಕನಾದವನಿಂದ ತಂದ ಚೈತನ್ಯಗಳ ಲೀಲೆಯ ಮೂಲಕ ಅವಳು ವಿಶ್ವದಲ್ಲಿ ಅನೇಕತೆಯನ್ನು ಹೊಂದಿದ ಭಗವಂತನನ್ನು ಪ್ರಕಟಿಸುತ್ತಾಳೆ, ತೆರೆದುತೋರಿಸುವ ಅವಳ ಮೂಲತತ್ವದಿಂದ ತೊಡಗಿಕೊಳ್ಳುವ ಹಾಗೂ ಉತ್ಕ್ರಾಂತಿಗೊಳಗಾಗುವ, ಕೊನೆಯಿಲ್ಲದೆ ಅಸ್ತಿತ್ವಕ್ಕೆ ಬರುವಿಕೆಗಳು ಭಗವಂತನ ಅನೇಕತೆಯಲ್ಲಿರುತ್ತವೆ. ಇನ್ನೊಂದೆಡೆಗೆ ಅದೇ ಚೈತನ್ಯಗಳು ಮರು–ಆರೋಹಣ ಮಾಡುವ ಪ್ರವಾಹದ ಮೂಲಕ ಎಲ್ಲವನ್ನು, ಯಾರ ಮೂಲಕ ಆ ಎಲ್ಲ ಚೈತನ್ಯಗಳು ಹೊರಹೊಮ್ಮಿದ್ದವೋ ಅವನತ್ತ ಮುನ್ನಡೆಸುತ್ತಾಳೆ, ಅದರಿಂದಾಗಿ ಆತ್ಮ ಉತ್ಕ್ರಾಂತಿಪರವಾದ ಪ್ರಕಟಣೆಯಲ್ಲಿ ಹೆಚ್ಚು ಹೆಚ್ಚಾಗಿ ಅಲ್ಲಿರುವ ದೈವಿಕತೆಯತ್ತ ಹೊರಳಬಹುದಾಗಿದೆ ಇಲ್ಲವೆ ಇಲ್ಲಿ ದೈವೀ ಗುಣಲಕ್ಷಣಗಳನ್ನು ಧರಿಸಬಹು–ದಾಗಿದೆ. ವಿಶ್ವವ್ಯಾಪಿ ಯಾಂತ್ರಿಕತೆಯನ್ನು ನಿರ್ಮಿಸುವ ಈಶ್ವರೀ ಶಕ್ತಿಯಲ್ಲಿ ಯಾಂತ್ರಿಕ ಕಾರ್ಯ ನಿರ್ವಹಣೆ ಮಾಡುವವಳ ಅಚೇತನ ಗುಣಲಕ್ಷಣವಿರುವುದಿಲ್ಲ, ಅಂತಹದನ್ನು ನಾವು ಪ್ರಕೃತಿಯ ಮೊದಲ ಹೊರರೂಪದಲ್ಲಿ ಕಾಣುತ್ತೇವೆ. ಹಾಗೆಯೇ ಅಲ್ಲಿ ನೈಜತೆಯಿಲ್ಲದಿರುವ, ಭ್ರಮೆಗಳನ್ನು, ಅರ್ಧಭ್ರಮೆಗಳನ್ನು ಸೃಷ್ಟಿಸುವವಳಿರುವ ಭಾವವಿರುವುದಿಲ್ಲ, ಇಂತಹ ಭಾವನೆಯು ಮಾಯೆಯನ್ನು ಕುರಿತಾದ ಮೊದಲ ದೃಷ್ಟಿಕೋನಕ್ಕೆ ಅಂಟಿಕೊಂಡಿದೆ. ಇಲ್ಲಿ ಪರಮೋಚ್ಚನೊಂದಿಗೆ, ಅವನಿಂದ ಬಂದ ಮೂಲ ತತ್ವದ ಮತ್ತು ಸ್ವಭಾವದ ಪ್ರಜ್ಞಾಪೂರ್ಣ ದೈವೀ ಸಾಮರ್ಥ್ಯವಿದೆ ಎಂದು ಅನುಭವಕ್ಕೆ ತಂದುಕೊಳ್ಳುತ್ತಿರುವ ಆತ್ಮಕ್ಕೆ ಒಮ್ಮೆಗೆ ಸ್ಪಷ್ಟವಾಗುತ್ತದೆ. ನಾವು ಅರ್ಥಮಾಡಿಕೊಳ್ಳಲಾಗದ ಯೋಜನೆಯ ಪ್ರಕಾರ ಈಶ್ವರೀಶಕ್ತಿ ನಮ್ಮನ್ನು ಅವಿದ್ಯೆಯಲ್ಲಿ, ಅಚೇತನದಲ್ಲಿ ಮುಳುಗಿಸಿದ್ದಾಳೆ, ಅವಳ ಶಕ್ತಿಗಳು ಇಂತಹ ಎಲ್ಲ ಬಗೆಯ ಜಗತ್ತಿನ ಸಂದಿಗ್ಧ ಶಕ್ತಿಗಳೆಂದು ಕಂಡುಬಂದಿವೆ ಎಂದಿದ್ದಾಗ್ಯೂ ಅವಳು ನಮ್ಮಲ್ಲಿ ದೈವೀಪ್ರಜ್ಞೆಯ ಬೆಳವಣಿಗೆಗಾಗಿ ಕಾರ್ಯ–ಮಾಡುತ್ತಿದ್ದಾಳೆ ಮತ್ತು ಮೇಲ್ಗಡೆಗಿದ್ದು ನಮ್ಮನ್ನು ತನ್ನ ಉಚ್ಚತರ ಅಸ್ತಿತ್ವದೆಡೆಗೆ ಎಳೆಯುತ್ತಿದ್ದಾಳೆ, ದೈವೀ ಜ್ಞಾನ, ಸಂಕಲ್ಪ ಮತ್ತು ದಿವ್ಯಾನಂದಗಳ ಸಾರವನ್ನೇ ನಮಗೆ ಹೆಚ್ಚು, ಹೆಚ್ಚಾಗಿ ತೆರೆದು ತೋರಿಸುತ್ತಿದ್ದಾಳೆ ಎಂಬುದು ಅತಿ ಕಡಿಮೆ ಸಮಯದಲ್ಲಿ ನಮಗೆ ಗೋಚರವಾಗುತ್ತದೆ. ಅವಿದ್ಯೆಯ ಚಲನೆಗಳಲ್ಲಿಯೂ ಕೂಡ

ಅನ್ವೇಷಕನ ಆತ್ಮ ಅವಳ ಪ್ರಜ್ಞಾಪೂರ್ಣ ಮಾರ್ಗದರ್ಶನವನ್ನು ಅರಿವಿಗೆ ತಂದುಕೊಳ್ಳುತ್ತದೆ. ಈ ಮಾರ್ಗದರ್ಶನ ಅವನ ಹೆಜ್ಜೆಗಳಿಗೆ ಆಧಾರ ನೀಡುತ್ತದೆ ಮತ್ತು ಅವನನ್ನು ನಿಧಾನವಾಗಿ ಇಲ್ಲವೆ ತೀವ್ರಗತಿಯಿಂದ, ನೇರವಾಗಿ ಇಲ್ಲವೆ ಅಡ್ಡದಾರಿಗಳ ಮೂಲಕ, ಅಂಧಕಾರದಿಂದ ಶ್ರೇಷ್ಠತರ ಪ್ರಜ್ಞೆಯ ಪ್ರಕಾಶದತ್ತ, ಮರ್ತ್ಯತೆಯಿಂದ ಅಮರತ್ವದೆಡೆಗೆ, ದುಷ್ಟವಾದುದರಿಂದ, ವೇದನೆಯಿಂದ ಅತ್ಯಂತ ಒಳ್ಳೆಯದಾದುರತ್ತ, ಸೌಖ್ಯದತ್ತ ಮುನ್ನಡೆಸಿಕೊಂಡು ಹೋಗುತ್ತದೆ, ಆ ಅತ್ಯಂತ ಒಳ್ಳೆಯದಾದುರ ಬಗ್ಗೆ ಮಾನವ ಮನಸ್ಸು ಕೇವಲ ಮಬ್ಬಾದ ಪ್ರತೀಕವನ್ನು ಕಲ್ಪಿಸಿಕೊಳ್ಳಬಹುದು. ಹೀಗೆ ಅವಳ ಸಾಮರ್ಥ್ಯ ವಿಮೋಚನೆಗೊಳಿಸುವಂತಹ–ದಾಗಿದೆ, ಕ್ರಿಯಾಶಕ್ತಿಯಾಗಿದೆ, ಸೃಜನಾತ್ಮಕವಾಗಿದೆ, ಪರಿಣಾಮಕಾರಿಯಾಗಿದೆ – ಸೃಜನಾತ್ಮಕತೆ ವಸ್ತುಗಳು ಹೇಗಿವೆಯೋ ಹಾಗೆ ಸೃಷ್ಟಿ ಮಾಡುವುದಕ್ಕಷ್ಟೇ ಅಲ್ಲ, ಆದರೆ ಅದು ವಸ್ತುಗಳು ಮುಂದೆ ಇರಬೇಕಾದ ರೀತಿಯಲ್ಲಿ ಸೃಷ್ಟಿಮಾಡುವುದಕ್ಕೆ ಮತ್ತು ಅವಿದ್ಯೆಯ ಮೂಲ ಸಾಮಗ್ರಿಯಿಂದ ತಯಾರಾದ, ಮನುಷ್ಯನ ನಿಮ್ನ ಪ್ರಜ್ಞೆಯಲ್ಲಿ ತಿರುಚಿಕೊಂಡ, ತೊಡಕುಹಾಕಿಕೊಂಡ ಚಲನೆಗಳನ್ನು ನಿರ್ಮೂಲ ಮಾಡುವುದಕ್ಕೆ ಇರುತ್ತದೆ, ಅದು ಉಚ್ಚತರ ದೈವೀ ಪ್ರಕೃತಿಯ ಮೂಲ ಸಾಮಗ್ರಿ ಹಾಗೂ ಶಕ್ತಿಗಳಲ್ಲಿ ಅವನ ಆತ್ಮವನ್ನು ಮತ್ತು ಸ್ವಭಾವವನ್ನು ಪುನರ್ನಿರ್ಮಾಣ ಮಾಡುತ್ತದೆ ಹಾಗೂ ಹೊಸದಾಗುವಂತೆ ಮಾಡುತ್ತದೆ. **– ಶ್ರೀ ಅರವಿಂದರು**

*

(25/69) ಭಗವಂತನೇ ಪ್ರಭು–ದಿವ್ಯಾತ್ಮ ನಿಷ್ಕ್ರಿಯವಾಗಿರುತ್ತದೆ, ಅದು ಎಲ್ಲ ವಿಷಯಗಳಿಗೆ ಆಧಾರ ನೀಡುತ್ತ ಯಾವಾಗಲೂ ನಿಶ್ಚಲ ನೀರವತೆಯಲ್ಲಿರುತ್ತದೆ–ಅದು ನಿಶ್ಚಲವಾಗಿರುವ ಮುಖ. ಕ್ರಿಯಾಶಕ್ತಿಯ ಮುಖವೂ ಇದೆ, ಅದರ ಮೂಲಕ ಭಗವಂತ ಕ್ರಿಯೆ ಕೈಗೊಳ್ಳುತ್ತಾನೆ–ಅದರ ಹಿಂದೆ ಜಗನ್ಮಾತೆ ಇದ್ದಾಳೆ, ಜಗನ್ಮಾತೆಯ ಮೂಲಕವೇ ಎಲ್ಲ ವಿಷಯಗಳನ್ನು ಸಿದ್ಧಿಸಿಕೊಳ್ಳಲಾಗುತ್ತದೆ.

**– ಶ್ರೀ ಅರವಿಂದರು**

*



# ದೈವೀ ಪ್ರೇಮದ ರಹಸ್ಯ

(24/599–606) ಪ್ರಚಲಿತ ವಿವರಣೆಯ ಪ್ರಕಾರ ಅವ್ಯೆಯಕ್ತಿಕ ಭಗವಂತನ ಆರಾಧನೆ ಭಕ್ತಿಯೋಗವಾಗಲಾರದು, ಏಕೆಂದರೆ ಪ್ರಚಲಿತ ಯೋಗಗಳ ರೂಪ–ಗಳಲ್ಲಿ ಅವ್ಯೆಯಕ್ತಿಕವಾದದ್ದನ್ನು ಸಂಪೂರ್ಣ ಏಕತೆಗಾಗಿ ಅರಸಲಾಗುತ್ತದೆ, ಆ ಏಕತೆಯಲ್ಲಿ ದೇವ ಹಾಗೂ ವ್ಯಕ್ತಿ ಮಾಯವಾಗುತ್ತಾರೆ ಮತ್ತು ಅಲ್ಲಿ ಆರಾಧಿಸು–ವವನು, ಆರಾಧನೆಗೊಳಪಡುವವನು ಇವರಲ್ಲಿ ಯಾರೂ ಉಳಿದುಕೊಂಡಿ–ರುವುದಿಲ್ಲ, ಕೇವಲ ಏಕವಾಗಿರುವ ಅನುಭವ, ಅನಂತ ಮಾತ್ರ ಉಳಿದುಕೊಂಡಿ–ರುತ್ತವೆ. ಆದರೆ ನಿಜವಾಗಿ ಆಧ್ಯಾತ್ಮಿಕ ಪ್ರಜ್ಞೆಯ ಪವಾಡಗಳನ್ನು ಅಷ್ಟು ಕಟ್ಟುನಿಟ್ಟಾದ ತರ್ಕಕ್ಕೆ ಒಳಪಡಿಸಬಾರದು. ಅನಂತನ ಬಗ್ಗೆ ನಮಗೆ ಭಾವನೆ ಬಂದ ಮೊದಲ ಸಲ ನಮ್ಮಲ್ಲಿರುವ ಸಾಂತ ವ್ಯಕ್ತಿವಿಶಿಷ್ಟತೆಯು ಅದರ ಸ್ಪರ್ಶಕ್ಕೊಳಗಾಗುವುದು, ಅದು ಆ ಸ್ಪರ್ಶಕ್ಕೆ ಉತ್ತರ ನೀಡಬಹುದು ಮತ್ತು ಒಂದು ಬಗೆಯ ಆರಾಧನೆಯೊಂದಿಗೆ ಅನಂತಕ್ಕೆ ಕರೆ ಕೊಡಬಹುದು. ಎರಡನೆಯದಾಗಿ ಅನಂತವನ್ನು ನಾವು ಏಕತೆಯ ಹಾಗೂ ದಿವ್ಯಾನಂದದ ಆಧ್ಯಾತ್ಮಿಕ ಅಂತಸ್ತು ಇಲ್ಲವೆ ಅದನ್ನು ಮಾತ್ರ ಸತ್ತೆಯ ಮಾಧ್ಯಮ ಹಾಗೂ ಎರಕ ಎಂದು ಪರಿಗಣಿಸುವುದಕ್ಕಿಂತ ಹೆಚ್ಚಾಗಿ ಅದನ್ನು ನಮ್ಮ ಪ್ರಜ್ಞೆಗೆ ಒಂದು ಅವರ್ಣನೀಯ ದೇವನ ಸಾನ್ನಿಧ್ಯವೆಂದು ಪರಿಗಣಿಸಬೇಕು, ಮತ್ತು ಆಗ ಕೂಡ ಪ್ರೇಮ ಮತ್ತು ಆರಾಧನೆ ತಮ್ಮ ಸ್ಥಾನಗಳನ್ನು ಕಂಡುಕೊಳ್ಳುತ್ತವೆ. ನಮ್ಮ ವ್ಯಕ್ತಿವಿಶಿಷ್ಟತೆ ಅದರೊಡನೆ ಏಕತೆಯಲ್ಲಿ ಕಳೆದು ಹೋಗುತ್ತದೆ ಎಂದು ತೋರಿಬಂದರೂ ಅದು ಇನ್ನೂ ಇರಬಹುದು–ನಿಜವಾಗಿ ಇರುತ್ತದೆ–ಏಕತೆಯ ಮೂಲಕ ವಿಶ್ವಂಭರ ದೈವಿಕವಾದುದರಲ್ಲಿ ಇಲ್ಲವೆ ಭಗವಂತನಲ್ಲಿ ದೈವಿಕವಾದ ವ್ಯಕ್ತಿ ವಿಶಿಷ್ಟತೆ ಕರಗಿ ಹೋದಾಗ ಪ್ರೇಮ ಮತ್ತು ಪ್ರೇಮಪಾತ್ರನಾದವನು ಇವರನ್ನು ಒಂದುಗೂಡಿಸುವ ಅತ್ಯಾನಂದದ ಅನುಭವದಲ್ಲಿ, ಮರೆತುಬಿಡಲಾಗಿರುತ್ತದೆ, ಆದರೆ ಅವರು ಏಕತೆಯಲ್ಲಿ ಗುಪ್ತವಾಗಿ ಮತ್ತು ಅವಚೇತನ ರೂಪದಲ್ಲಿ ಪಟ್ಟು ಹಿಡಿದು ಅಲ್ಲಿರುತ್ತಾರೆ. ಪ್ರೇಮದ ಮೂಲಕ ಆಗುವ ಏಕತೆಯು ಅವಶ್ಯವಾಗಿ ಈ ಸ್ವರೂಪದ್ದಾಗಿರಬೇಕು. ವ್ಯಕ್ತಿಗತ ಆತ್ಮ ಮತ್ತು ದೇವ ಇವರ ನಡುವಿರುವ ಆಧ್ಯಾತ್ಮಿಕ ಸಂಬಂಧದ ವೈವಿಧ್ಯಮಯ ಅನುಭವಗಳಿಗೆ ಕಿರೀಟಪ್ರಾಯವಾಗಿ ಕೊನೆಗೆ ಬರುವ ಏಕತೆಯ ಈ ಸಂತೋಷವನ್ನು ಪಡೆಯುವುದಕ್ಕಾಗಿಯೇ ಏಕನಾದವನು ಅನೇಕ–ನಾದನೆಂದು ಕೂಡ ಒಂದರ್ಥದಲ್ಲಿ ಹೇಳಬಹುದು.

ಆದಾಗ್ಯೂ ದೈವೀಪ್ರೇಮದ ಹೆಚ್ಚು ವೈವಿಧ್ಯಮಯವಾದ ಮತ್ತು ಅತ್ಯಂತ ನಿಕಟವಾದ ಅನುಭವ ಅವೈಯಕ್ತಿಕವಾದದ್ದನ್ನು ಬೆಂಬತ್ತುವುದರಿಂದ ಬರಲಾರದು. ಅದಕ್ಕಾಗಿ ನಾವು ಆರಾಧಿಸುವ ದೇವ ನಮಗೆ ಹತ್ತಿರವಾದವನು, ವೈಯಕ್ತಿಕವಾದವನು ಆಗಬೇಕು. ಅವೈಯಕ್ತಿಕವಾದುದರ ಹೃದಯದಲ್ಲಿ ನಾವು ಪ್ರವೇಶಿಸಿದಾಗ ಅದಕ್ಕೆ ತನ್ನೊಳಗಿರುವ ವ್ಯಕ್ತಿವಿಶಿಷ್ಟತೆಯ ಎಲ್ಲ ಸಿರಿ ಸಂಪತ್ತನ್ನು ತೆರೆದು ತೋರಿಸುವುದು ಸಾಧ್ಯವಿದೆ. ಮತ್ತು ಅನಂತ ದೈವೀ ಸಾನ್ನಿಧ್ಯವನ್ನು ಮಾತ್ರ ಅರಸಿಕೊಂಡು ಹೊರಟು ಅದರಲ್ಲಿ ಪ್ರವೇಶಿಸಲು ಹಾಗೂ ಅದನ್ನು ಅಪ್ಪಿಕೊಳ್ಳಲು ಬಯಸಿದವನಿಗೆ ಅವನು ಕನಸಿನಲ್ಲೂ ಕಂಡಿರದ ವಿಷಯಗಳು ಗೋಚರವಾಗಬಹುದು. ಸೀಮಿತಗೊಳಿಸುವ ನಮ್ಮ ಬುದ್ಧಿಮತ್ತೆಯ ವಿಚಾರಗಳನ್ನು ಕಂಗೆಡಿಸುವ ಆಶ್ಚರ್ಯಕರ ಸಂಗತಿಗಳು ಭಗವಂತನ ಸತ್ತೆಯಲ್ಲಿವೆ. ಆದರೆ ಸಾಮಾನ್ಯವಾಗಿ ಭಕ್ತಿಯ ಮಾರ್ಗ ಇನ್ನೊಂದು ತುದಿಯಿಂದ ಪ್ರಾರಂಭವಾಗುತ್ತದೆ, ಅದು ದೈವೀ ವ್ಯಕ್ತಿವಿಶಿಷ್ಟತೆಯ ಆರಾಧನೆ ಕೈಕೊಳ್ಳುವುದರ ಮೂಲಕ ಪ್ರಾರಂಭವಾಗುತ್ತದೆ, ಮೇಲಕ್ಕೇಳುತ್ತದೆ, ತನ್ನ ಹರಿವನ್ನು ವಿಸ್ತಾರಗೊಳಿಸುತ್ತದೆ. ಭಗವಂತ ದೈವೀ ಸತ್ತೆಯಾಗಿದ್ದಾನೆ, ಅಮೂರ್ತ ಅಸ್ತಿತ್ವವಾಗಿಲ್ಲ ಇಲ್ಲವೆ ಶುದ್ಧ, ಕಾಲಾತೀತ, ಅನಂತ ಗಣ್ಯತೆ ಹೊಂದಿದವನಾಗಿಲ್ಲ. ಅವನು ಮೂಲ ಹಾಗೂ ವಿಶ್ವಂಭರ ಅಸ್ತಿತ್ವವಾಗಿದ್ದಾನೆ, ಆದರೆ ಆ ಅಸ್ತಿತ್ವ ಸತ್ತೆಯ ಪ್ರಜ್ಞೆ ಹಾಗೂ ದಿವ್ಯಾನಂದಗಳಿಂದ ಬೇರ್ಪಟ್ಟಿಲ್ಲ. ತನ್ನದೇ ಪ್ರಜ್ಞೆ ಮತ್ತು ದಿವ್ಯಾನಂದಗಳ ಬಗ್ಗೆ ಅರಿವುಳ್ಳ ಸತ್ತೆಯನ್ನು ದೈವೀ ಅನಂತ ವ್ಯಕ್ತಿವಿಶಿಷ್ಟತೆ ಅಥವಾ ಪುರುಷ ಎಂದು ನಾವು ಕರೆಯಬಹುದು ಅಲ್ಲದೆ ಆ ಅಸ್ತಿತ್ವ ಎಲ್ಲ ಪ್ರಜ್ಞೆಯ ಸಾಮರ್ಥ್ಯ ಅಥವಾ ದೈವೀಶಕ್ತಿಯಾಗಿ ಇರುವುದನ್ನು ಸೂಚಿಸುತ್ತದೆ. ಅನಂತ ಪ್ರಜ್ಞೆಯಿರುವ ಸತ್ತೆಯಲ್ಲಿ ಅನಂತ ಸಾಮರ್ಥ್ಯವಿರುತ್ತದೆ ಮತ್ತು ಆ ಸಾಮರ್ಥ್ಯದ ಮೂಲಕ ವಿಶ್ವದಲ್ಲಿ ಎಲ್ಲವೂ ಅಸ್ತಿತ್ವದಲ್ಲಿದೆ, ಎಲ್ಲ ಸತ್ತೆಗಳು ಈ ದೈವೀಸತ್ತೆಯ ಮೂಲಕ ಅಸ್ತಿತ್ವದಲ್ಲಿವೆ, ಎಲ್ಲ ವಸ್ತು–ವಿಷಯಗಳು ಈ ದೈವೀ ಸತ್ತೆಯ ಮುಖಗಳಾಗಿವೆ. ಎಲ್ಲ ಯೋಚನೆ, ಕ್ರಿಯೆ, ಭಾವನೆ, ಪ್ರೇಮ ಅವನಿಂದ ಹೊರಹೊಮ್ಮುತ್ತವೆ ಮತ್ತು ಮರಳಿ ಅವನತ್ತ ಸಾಗುತ್ತವೆ ಮತ್ತು ಅವುಗಳ ಎಲ್ಲ ಪರಿಣಾಮಗಳು ಅವನನ್ನೇ ಉಗಮಸ್ಥಾನವನ್ನಾಗಿ, ಆಧಾರವನ್ನಾಗಿ ಮತ್ತು ರಹಸ್ಯ ಗುರಿಯನ್ನಾಗಿ ಮಾಡಿಕೊಂಡಿವೆ ಮತ್ತು ಈ ದೇವನಿಗೆ, ಈ ದೈವೀ ಸತ್ತೆಗೆ ಸಮಗ್ರ ಯೋಗದ ಭಕ್ತಿಯನ್ನು ದೀರ್ಘವಾಗಿ ಅರ್ಪಿಸಲಾಗುತ್ತದೆ ಮತ್ತು ಮೇಲಕ್ಕೆತ್ತ–



ಲಾಗುತ್ತದೆ. ವಿಶ್ವಾತೀತವಾದ ಭಕ್ತಿ ಅವನನ್ನು ಸಂಪೂರ್ಣ ಏಕತೆಯ ಆನಂದ ಪರವಶತೆಯಲ್ಲಿ ಅರಸುತ್ತದೆ, ವಿಶ್ವಂಭರವಾದ ಭಕ್ತಿ ಅವನನ್ನು ಅನಂತ ಗುಣದಲ್ಲಿ, ಪ್ರತಿಯೊಂದು ಮುಖದಲ್ಲಿ, ಮತ್ತು ಎಲ್ಲ ಸತ್ತೆಗಳಲ್ಲಿ ವಿಶ್ವಂಭರ ದಿವ್ಯಾನಂದ ಹಾಗೂ ಪ್ರೇಮಗಳೊಂದಿಗೆ ಅರಸುತ್ತದೆ ವ್ಯಕ್ತಿಗತ ಭಕ್ತಿಯು ಪ್ರೇಮ ವ್ಯಕ್ತಿಗಳ ನಡುವೆ ಸೃಷ್ಟಿಸುವ, ಅವನೊಡನಿರುವ ಎಲ್ಲ ಮಾನವ ಸಂಬಂಧಗಳಲ್ಲಿ ಪ್ರವೇಶಿಸುತ್ತದೆ.

ಹೃದಯ ಅರಸುತ್ತಿರುವ ಎಲ್ಲದರ ಮೇಲಿನ ಸಂಪೂರ್ಣ ಸಮಗ್ರತೆಯನ್ನು ಪ್ರಾರಂಭದಿಂದ ಹಿಡಿದುಕೊಳ್ಳಲು ಸಾಧ್ಯವಾಗದೆ ಇರಬಹುದು, ವಾಸ್ತವದಲ್ಲಿ ಅದು ಸಾಧ್ಯವಾಗಬೇಕಾದರೆ ಹಿಂದಿನ ಜೀವನದ ಪ್ರವೃತ್ತಿಯ ಮೂಲಕ ಅದಾಗಲೆ ಬುದ್ಧಿಮತ್ತೆ, ಮನೋಧರ್ಮ ಮತ್ತು ಭಾವನಾತ್ಮಕ ಮನಸ್ಸು ವಿಸ್ತಾರದಲ್ಲಿ ಹಾಗೂ ಸೂಕ್ಷ್ಮತೆಯಲ್ಲಿ ಅಭಿವೃದ್ಧಿ ಹೊಂದಿರಬೇಕಾಗುತ್ತದೆ. ಸಾಮಾನ್ಯ ಜೀವನದ ಉದ್ದೇಶ ಅದರತ್ತ ಕರೆದೊಯ್ಯುವುದೇ ಆಗಿದೆ, ಸಾಮಾನ್ಯ ಜೀವನದಲ್ಲಿ ವಿಸ್ತಾರಗೊಳ್ಳುತ್ತಿರುವ ಬುದ್ಧಿಮತ್ತೆಯ ಸಂಸ್ಕೃತಿ, ಸೌಂದರ್ಯಾಭಿರುಚಿಯ ಹಾಗೂ ಭಾವನಾತ್ಮಕ ಮನಸ್ಸು, ನಮ್ಮ ಸಂಕಲ್ಪದ ಹಾಗೂ ಕ್ರಿಯಾಶೀಲ ಅನುಭವದ ನಮ್ಮ ಭಾಗಗಳ ವಿಸ್ತರಣೆ ಇವುಗಳ ಮೂಲಕ ಆ ಕರೆದೊಯ್ಯುವಿಕೆ ಸಾಧ್ಯವಾಗುವುದು. 'ತತ್' ತನ್ನ ಸ್ವ–ಅಭಿವ್ಯಕ್ತಿಯ ದೇವಾಲಯಕ್ಕಾಗಿ ತಯಾರು ಮಾಡುತ್ತಿರುವ ಸಾಮಾನ್ಯ ಸತ್ತೆ ಅದರ ಎಲ್ಲ ಸತ್ಯಕ್ಕೆ ಸುಲಭವಾಗಿ ತೆರೆದುಕೊಳ್ಳಲೆಂದು ಅದನ್ನು ಆ ಅನುಭವ ವಿಸ್ತರಿಸುತ್ತದೆ ಹಾಗೂ ಸಂಸ್ಕಾರಕ್ಕೆ ಒಳಪಡಿಸುತ್ತದೆ. ಸಾಮಾನ್ಯವಾಗಿ ಮನುಷ್ಯ ತನ್ನ ಈ ಎಲ್ಲ ಭಾಗಗಳಲ್ಲಿ ಸೀಮಿತತೆಗೆ ಒಳಗಾಗಿರುತ್ತಾನೆ, ಮೊದಲು ಅವನು ತನ್ನದೇ ಸ್ವಭಾವಕ್ಕೆ ಹಾಗೂ ಗತಕಾಲದ ಅಭಿವೃದ್ಧಿ ಮತ್ತು ಸಹವಾಸಗಳಿಗೆ ಹೆಚ್ಚು ಅನುರೂಪವಾದದ್ದನ್ನು ಮಾತ್ರ ಗ್ರಹಿಸಬಲ್ಲನು. ಆದ್ದರಿಂದ ಭಗವಂತ, ಮೊದಲು ನಮ್ಮನ್ನು ತನ್ನ ಸೀಮಿತ ದೈವೀ ಗುಣಗಳು ಹಾಗೂ ಸ್ವಭಾವ ಇವುಗಳ ದೃಢೀಕರಣಗಳಲ್ಲಿ ನಮ್ಮನ್ನು ಸಂಧಿಸುತ್ತಾನೆ, ಅನ್ವೇಷಕನು ತಿಳಿದುಕೊಳ್ಳಬಲ್ಲ ಹಾಗೂ ಅವನ ಸಂಕಲ್ಪ ಮತ್ತು ಹೃದಯ ಪ್ರತಿಸ್ಪಂದಿಸಬಲ್ಲ ವಿಷಯಗಳಿಗೆ ಪರಿಪೂರ್ಣನಾದವನೆಂದು ಅವನಿಗೆ ಭಗವಂತ ತನ್ನನ್ನು ಪರಿಚಯಿಸಿಕೊಡುತ್ತಾನೆ, ತನ್ನ ದೈವತ್ವದ ಯಾವುದೋ ಒಂದು ಹೆಸರನ್ನು ಹಾಗೂ ಒಂದು ಮುಖವನ್ನು ತೆರೆದು ತೋರಿಸುತ್ತಾನೆ. ಇದನ್ನೇ ಇಷ್ಟ ದೇವತೆಯೆಂದು ಯೋಗದಲ್ಲಿ ಕರೆಯ–

ಲಾಗಿದೆ, ಇಷ್ಟ ದೇವತೆಯೆಂದರೆ ನಮ್ಮ ಸ್ವಭಾವ ನಾವು ಕೈಕೊಳ್ಳುವ ಪೂಜೆಗಾಗಿ ಆಯ್ದುಕೊಂಡ ನಾಮ ಹಾಗೂ ರೂಪ. ಮಾನವ ಸತ್ತೆ ಈ ದೇವನನ್ನು ತನ್ನ ಎಲ್ಲ ಭಾಗಗಳಿಂದ ಅಪ್ಪಿಕೊಳ್ಳಲೆಂದು ಅವನನ್ನು ಒಂದು ರೂಪದಿಂದ ಪ್ರತಿನಿಧಿಸ–ಲಾಗಿದೆ, ಈ ರೂಪ ಆ ದೇವನ ಭಾವಗಳಿಗೆ, ಗುಣಗಳಿಗೆ ಉತ್ತರ ನೀಡುತ್ತದೆ ಮತ್ತು ಆರಾಧಕನಿಗೆ ಅದು ಅವನು ಆರಾಧಿಸುವ ದೇವನ ಜೀವಂತವಿರುವ ದೇಹವಾಗುತ್ತದೆ. ಇವುಗಳೇ ವಿಷ್ಣು, ಶಿವ, ಕೃಷ್ಣ, ಕಾಳಿ, ದುರ್ಗಾ, ಕ್ರಿಸ್ತ, ಬುದ್ಧ ಇವರ ರೂಪಗಳಾಗಿವೆ, ಇವುಗಳನ್ನು ಮನುಷ್ಯ ಆರಾಧನೆಗಾಗಿ ಹಿಡಿದುಕೊಳ್ಳುತ್ತಾನೆ. ರೂಪರಹಿತ ದೇವನನ್ನು ಪೂಜಿಸುವ ಏಕದೈವವಾದಿಯೂ ಕೂಡ ಆ ದೇವನಿಗೆ ಗುಣಗಳಿರುವ ಮಾನಸಿಕ ಇಲ್ಲವೆ ಪ್ರಕೃತಿಯ ಒಂದು ರೂಪಕೊಡುತ್ತಾನೆ, ಅದರ ಮೂಲಕ ಆ ದೇವನ ಬಗ್ಗೆ ಕಲ್ಪನೆ ಮಾಡಿಕೊಳ್ಳುತ್ತಾನೆ ಹಾಗೂ ಅವನ ಹತ್ತಿರ ಸಾಗುತ್ತಾನೆ. ಆದರೆ ಭಗವಂತನ ಒಂದು ಜೀವಂತ ರೂಪವನ್ನು, ಒಂದು ಮಾನಸಿಕ ದೇಹವನ್ನು ನೋಡಲು ಶಕ್ತನಾಗುವುದು ಆ ಮಾರ್ಗಕ್ಕೆ ಶ್ರೇಷ್ಠತರ ಹತ್ತಿರವಾಗುವಿಕೆಯನ್ನು, ಮಾಧುರ್ಯವನ್ನು ಕೊಡುತ್ತದೆ.

ಭಕ್ತಿಯ ಸಮಗ್ರ ಯೋಗದ ಮಾರ್ಗ ದೇವನನ್ನು ಕುರಿತಾದ ಈ ಕಲ್ಪನೆಯನ್ನು ವಿಶ್ವಂಭರಗೊಳಿಸುವುದಾಗಿದೆ, ಅನೇಕ ಹಾಗೂ ಎಲ್ಲವನ್ನು ಅಪ್ಪಿಕೊಳ್ಳುವ ಸಂಬಂಧದಿಂದ ನಿಕಟವಾಗಿರುವಂತೆ ಅವನನ್ನು ವ್ಯಕ್ತಿವಿಶಿಷ್ಟನನ್ನಾಗಿ ಮಾಡುವುದಾ–ಗಿದೆ, ಎಲ್ಲ ಸತ್ತೆಗೆ ಅವನು ಸತತ ಉಪಸ್ಥಿತವಿರುವಂತೆ ಮಾಡುವುದಾಗಿದೆ ಮತ್ತು ಅವನಿಗೆ ಅರ್ಪಿಸುವುದಾಗಿದೆ, ಕೊಟ್ಟುಕೊಳ್ಳುವುದಾಗಿದೆ, ಇಡೀ ಸತ್ತೆಯನ್ನು ಸಮರ್ಪಣ ಮಾಡುವುದಾಗಿದೆ, ಅದರಿಂದಾಗಿ ಅವನು ನಮ್ಮ ಬಳಿ, ನಮ್ಮೊಳಗೆ ನೆಲೆಸುವವನು, ಮತ್ತು ನಾವು ಅವನೊಳಗೆ ಮತ್ತು ಅವನೊಂದಿಗೆ ನೆಲೆಸುತ್ತೇವೆ, ಮನ್ಮನಾ ಮತ್ತು ದರ್ಶನ, ಎಲ್ಲ ವಸ್ತು–ವಿಷಯಗಳಲ್ಲಿ ಅವನನ್ನು ಕುರಿತು ಯೋಚಿಸುವುದು, ಅವನನ್ನೇ ಎಲ್ಲೆಡೆಯಲ್ಲಿ ಯಾವಾಗಲೂ ನೋಡುತ್ತಿರುವುದು ಇದೆಲ್ಲ ಭಕ್ತಿಮಾರ್ಗಕ್ಕೆ ಅವಶ್ಯವಾದದ್ದು. ನಾವು ಭೌತಿಕ ಪ್ರಕೃತಿಯ ವಸ್ತುಗಳನ್ನು ನೋಡಿದಾಗ ನಮ್ಮ ಪ್ರೇಮದ ದೈವೀ ವಸ್ತುವನ್ನು ಅಲ್ಲಿ ನೋಡಬೇಕು, ಮನುಷ್ಯರನ್ನು, ಸತ್ತೆಗಳನ್ನು ನೋಡಿದಾಗ ನಾವು ಅವರಲ್ಲಿ ಹಾಗೂ ಅವರೊಡನಿರುವ ನಮ್ಮ ಸಂಬಂಧದಲ್ಲಿ ಅವನನ್ನು ನೋಡಬೇಕು; ಅದರಿಂದಾಗಿ ನಾವು ಭಗವಂತನ ರೂಪಗಳೊಡನೆ ಸಂಬಂಧಗಳಲ್ಲಿ ಪ್ರವೇಶಿಸುತ್ತಿದ್ದೇವೆ



ಎಂಬುದನ್ನು ಕಂಡುಕೊಳ್ಳುವಂತಾಗುತ್ತದೆ. ನಮಗೆ ಪರಿಚಿತವಿರುವ ಭೌತಿಕ ಜಗತ್ತಿನ ಮೇರೆಗಳನ್ನು ಮುರಿದು ಹಾಕಿ ಆಚೆಗೆ ಹೋದಾಗ ಇಲ್ಲವೆ ಬೇರೆ ಸ್ತರದ ಸತ್ತೆಗಳೊಡನೆ ಸಂಬಂಧ ಉಂಟಾದಾಗ ಕೂಡ ಅದೇ ಬಗೆಯ ಯೋಚನೆ, ದರ್ಶನ ನಮ್ಮ ಮನಸ್ಸಿಗೆ ನಿಜವಾಗಿರುವಂತೆ ಮಾಡಬೇಕು. ನಮ್ಮ ಮನಸ್ಸುಗಳ ಸಾಮಾನ್ಯ ರೂಢಿಯ ಪ್ರಕಾರ ಅವು ಕೇವಲ ಭೌತಿಕ ಪ್ರಪಂಚಕ್ಕೆ ಮತ್ತು ತೋರಿಕೆಯ ರೂಪಕ್ಕೆ ಹಾಗೂ ಸಾಧಾರಣ ಊನಗೊಂಡ ಸಂಬಂಧಕ್ಕೆ ಮಾತ್ರ ತೆರೆದುಕೊಂಡಿರುತ್ತವೆ ಮತ್ತು ಅಂತರಂಗದೊಳಗಿರುವ ರಹಸ್ಯ ದೇವನನ್ನು ಅಲಕ್ಷಿಸುತ್ತವೆ, ಆ ರೂಢಿ ಈ ಆಳಾತಿಆಳದ ಮತ್ತು ವಿಸ್ತಾರವಾದ ಗ್ರಹಣ ಶಕ್ತಿ ಹಾಗೂ ಶ್ರೇಷ್ಠತರ ಸಂಬಂಧ ಹೊಂದಿರುವ ಎಲ್ಲವನ್ನೂ ಅಪ್ಪಿಕೊಳ್ಳುವ ಪ್ರೇಮ ಹಾಗೂ ದಿವ್ಯಾನಂದವಿರುವ, ನಿಂತು ಹೋಗದ ರೂಢಿಗೆ ಶರಣಾಗಬೇಕು. ಎಲ್ಲ ದೇವರುಗಳಲ್ಲಿ ನಾವು ನಮ್ಮ ಹೃದಯದಿಂದ ಮತ್ತು ಎಲ್ಲ ಸತ್ತೆಯಿಂದ ಪೂಜಿಸುವ ಈ ಏಕೈಕ ದೇವನನ್ನು ನೋಡಬೇಕು, ಅವರು ಅವನ ದೈವತ್ವದ ರೂಪ–ಗಳಾಗಿರುತ್ತಾರೆ. ಹೀಗೆ ನಮ್ಮ ಆಧ್ಯಾತ್ಮಿಕ ಅಪ್ಪುಗೆಯನ್ನು ವಿಸ್ತರಿಸುತ್ತ ನಾವು ಒಂದು ಹಂತ ತಲುಪುತ್ತೇವೆ, ಅಲ್ಲಿ ಎಲ್ಲವೂ ಅವನೇ ಆಗಿರುತ್ತಾನೆ ಮತ್ತು ಈ ಪ್ರಜ್ಞೆಯ ದಿವ್ಯಾನಂದದಿಂದ ಜಗತ್ತನ್ನು ನೋಡುವ ರೀತಿ ನಮ್ಮ ಸಾಮಾನ್ಯ ತಡೆರಹಿತ ರೀತಿಯಾಗುತ್ತದೆ. ಅದು ನಮಗೆ ಅವನೊಡನಿರುವ ನಮ್ಮ ಏಕತೆಯ ಬಾಹ್ಯ ಅಥವಾ ವಸ್ತುನಿಷ್ಠ ವಿಶ್ವಂಭರತೆಯನ್ನು ತಂದುಕೊಡುತ್ತದೆ.

ಆಂತರಿಕವಾಗಿ ಪ್ರೀತಿಪಾತ್ರನ ಪ್ರತೀಕ ಆಂತರಿಕ ಕಣ್ಣಿಗೆ ಗೋಚರವಾಗಬೇಕು, ತನ್ನ ಅರಮನೆಯಲ್ಲಿ ವಾಸಿಸುತ್ತಿರುವ ಹಾಗೆ ಅವನು ನಮ್ಮೊಳಗೆ ವಾಸಮಾಡ–ಬೇಕು, ತನ್ನ ಸಾನ್ನಿಧ್ಯದ ಮಾಧುರ್ಯದೊಂದಿಗೆ ನಮ್ಮ ಹೃದಯಗಳಿಗೆ ತಿಳಿಸಿ–ಕೊಡಬೇಕು, ಮಿತ್ರನೊಬ್ಬನ ಹಾಗೆ ನಮ್ಮ ಮನಸ್ಸಿನ ಹಾಗೂ ಪ್ರಾಣದ ಚಟು–ವಟಿಕೆಗಳ ಮೇಲೆ ಅಧ್ಯಕ್ಷತೆವಹಿಸಬೇಕು, ನಮ್ಮ ಸತ್ತೆಯ ಶಿಖರದಿಂದ ಪ್ರಭು ಹಾಗೂ ಪ್ರೇಮಿಯಾಗಿ ನಮ್ಮನ್ನು ವಿಶ್ವದಲ್ಲಿ ತನ್ನೊಡನೆ ಮೇಲಿನಿಂದ ಏಕ–ವಾಗುವಂತೆ ಮಾಡಬೇಕು. ಸತತ ಇರುವ ಆಂತರಿಕ ಸಂಸರ್ಗ ಸಂತೋಷದ ವಿಷಯವಾಗಿದ್ದು, ಅದು ಹತ್ತಿರದ್ದಾಗುವಂತೆ, ಶಾಶ್ವತವಾಗುವಂತೆ ಮತ್ತು ವಿಫಲ–ವಾಗದಂತೆ ಮಾಡಬೇಕು. ನಮ್ಮ ಮನಸ್ಸನ್ನಾವರಿಸುವ ವಿಷಯಗಳಲ್ಲಿ ಮಗ್ನವಾಗಿ–ರುವ ಸಾಮಾನ್ಯ ಸ್ಥಿತಿಯಿಂದ ನಾವು ನಮ್ಮೊಳಗೆ ಹಿಂದೆಗೆದುಕೊಂಡ ಮತ್ತು

ಅಸಾಧಾರಣ ರೀತಿಯಲ್ಲಿ ದೇವನಿಗೆ ಹತ್ತಿರವಾಗಿರುವ, ಆರಾಧನೆ ಮಾಡುತ್ತಿರುವ ಸ್ಥಿತಿಗಷ್ಟೇ ಈ ಸಂಸರ್ಗ ಸೆರೆ ಸಿಕ್ಕಿಹಾಕಿಕೊಳ್ಳಬಾರದು ಹಾಗೆಯೇ ನಮ್ಮ ಮಾನವ–ಸಹಜ ಚಟುವಟಿಕೆಗಳನ್ನು ದೂರವಿರಿಸುವ ಸ್ಥಿತಿಗೂ ಸೀಮಿತವಾಗಿರಬಾರದು. ನಮ್ಮ ಎಲ್ಲ ಯೋಚನೆಗಳು, ಪ್ರಚೋದನೆಗಳು, ಭಾವನೆಗಳು, ಕ್ರಿಯೆಗಳು ಇವೆಲ್ಲ–ವನ್ನು ಅವನಿಗೆ ಅನುಮತಿ ನೀಡುವುದಕ್ಕಾಗಿ ಇಲ್ಲವೆ ನೀಡದೆ ಇರುವುದಕ್ಕಾಗಿ ವಹಿಸಿಕೊಡಬೇಕು, ಇಲ್ಲವೆ ನಾವು ಇನ್ನೂ ಈ ಹಂತವನ್ನು ತಲುಪಿರದಿದ್ದರೆ ಅವುಗಳನ್ನು ನಮ್ಮ ಅಭೀಪ್ಸೆಯ ಯಜ್ಞದಲ್ಲಿ ಅರ್ಪಿಸಬೇಕು, ಅದರಿಂದಾಗ ಅವನು ಹೆಚ್ಚು ಹೆಚ್ಚಾಗಿ ನಮ್ಮಲ್ಲಿ ಅವರೋಹಣ ಮಾಡುವನು, ಅವೆಲ್ಲ ವಿಷಯಗಳಲ್ಲಿ ತನ್ನೆಲ್ಲ ಸಂಕಲ್ಪ ಮತ್ತು ಸಾಮರ್ಥ್ಯ, ಪ್ರಕಾಶ ಹಾಗೂ ಜ್ಞಾನ, ಪ್ರೇಮ ಹಾಗೂ ದಿವ್ಯಾನಂದ ಇವುಗಳೊಡನೆ ಉಪಸ್ಥಿತನಿರುವನು, ಅವುಗಳನ್ನೆಲ್ಲ ಆವರಿಸಿರುವನು. ಕೊನೆಗೆ ನಮ್ಮ ಎಲ್ಲ ಯೋಚನೆಗಳು, ಭಾವನೆಗಳು, ಪ್ರಚೋದನೆಗಳು ಅವನಿಂದ ಮುಂದುವರಿಯಲು ಪ್ರಾರಂಭಿಸುತ್ತವೆ. ನಮ್ಮ ಇಡೀ ಅಂತರಂಗದ ಜೀವನದಲ್ಲಿ ನಾವು ಆರಾಧಿಸುವ ಭಗವಂತನ ಅಸ್ತಿತ್ವ ಹಾಗೂ ನಮ್ಮದೇ ಜೀವನ ಇವುಗಳ ನಡುವೆ ಯಾವುದೇ ವಿಭಜನೆ ಉಳಿದಿರುವುದಿಲ್ಲ ಎಂಬ ಭಾವನೆ ಬರುವವರೆಗೆ ನಾವು ಅವನದೇ ಸತ್ತೆಯ ಒಂದು ಭಾಗವಾಗಿದ್ದೇವೆ ಎಂಬುದರ ಬಗ್ಗೆ ಪ್ರಜ್ಞೆ–ಯುಳ್ಳವರಾಗಿರುತ್ತೇವೆ. ಹಾಗೆಯೇ ಎಲ್ಲ ಘಟನೆಗಳಲ್ಲಿ ದೈವೀ ಪ್ರೇಮಿಯು ನಮ್ಮೊಡನೆ ನಡೆಸುವ ವ್ಯವಹಾರಗಳನ್ನು ಗಮನಿಸಬೇಕು ಮತ್ತು ಅವುಗಳಲ್ಲಿ ಎಂತಹ ಹರ್ಷಕಂಡುಕೊಳ್ಳಬೇಕೆಂದರೆ ದುಃಖ, ವೇದನೆ ಮತ್ತು ಭೌತಿಕ ನೋವು ಇವೆಲ್ಲ ಅವನ ಕಾಣಿಕೆಗಳ ಸ್ವರೂಪ ಪಡೆಯುತ್ತವೆ ಮತ್ತು ದಿವ್ಯಾನಂದದಲ್ಲಿ ಪರಿವರ್ತಿತವಾಗುತ್ತವೆ ಮತ್ತು ಕೊನೆಗೆ ದೈವೀ ಸಂಪರ್ಕದ ಭಾವದಿಂದ ಹತವಾದ ದಿವ್ಯಾನಂದದಲ್ಲಿ ಮಾಯವಾಗುತ್ತವೆ, ಏಕೆಂದರೆ ಅವನ ಹಸ್ತಗಳ ಸ್ಪರ್ಶ ಅದ್ಭುತ ಪರಿವರ್ತನೆ ತರುವ ರಸವಿದ್ಯಾತಜ್ಞನಂತಿರುತ್ತದೆ. ಕೆಲವರು ಜೀವನವನ್ನು ತಿರಸ್ಕರಿಸುತ್ತಾರೆ, ಏಕೆಂದರೆ ಅದು ದುಃಖದಿಂದ, ನೋವಿನಿಂದ ಕಳಂಕಿತವಾಗಿದೆ, ಆದರೆ ಭಗವಂತನ ಪ್ರೇಮಿಗೆ ದುಃಖ ಮತ್ತು ನೋವುಗಳು ಅವನನ್ನು ಭೇಟಿ ಮಾಡುವ ಸಾಧನವಾಗುತ್ತವೆ, ಅವನ ಒತ್ತಡದ ಗುರುತಾಗಿರುತ್ತವೆ, ಕೊನೆಗೆ ಮುಸುಕುಗಳು ದಿವ್ಯಾನಂದವನ್ನು ಬಚ್ಚಿಡುವುದು ಸಾಧ್ಯವಾಗದೆ ಹೋಗಿ ಅವನ ಸ್ವಭಾವದೊಂದಿಗೆ ನಮ್ಮ ಏಕತೆ ಪೂರ್ಣವಾಗಿ ದುಃಖ, ನೋವು ಕೂಡಲೆ ನಿಂತುಹೋಗುತ್ತವೆ. ಅವು ದಿವ್ಯಾನಂದವಾಗಿ ಪರಿವರ್ತನೆಗೊಳ್ಳುತ್ತವೆ.



ಈ ಏಕತೆ ಸಂಭವಿಸಲು ಕಾರಣವಾದ ಎಲ್ಲ ಸಂಬಂಧಗಳು ಈ ಮಾರ್ಗದಲ್ಲಿ ಗಾಢವಾಗಿರುವ ದಿವ್ಯಾನಂದದೊಡನೆ ಕೂಡಿರುವ ವೈಯಕ್ತಿಕ ಸಂಬಂಧ–ಗಳಾಗಿರುತ್ತವೆ. ಕೊನೆಗೆ ಯಾವುದು ಈ ಎಲ್ಲ ಸಂಬಂಧಗಳನ್ನು ಒಳಗೊಳ್ಳು–ತ್ತದೆಯೋ, ಕೈಗೆತ್ತಿಕೊಳ್ಳುತ್ತದೆಯೋ ಹಾಗೂ ಏಕತ್ರಗೊಳಿಸುತ್ತದೆಯೋ ಅದು ಪ್ರೇಮಿ ಹಾಗೂ ಪ್ರೇಮಪಾತ್ರ ಇವರ ನಡುವಿನ ಸಂಬಂಧವಾಗಿರುತ್ತದೆ, ಏಕೆಂದರೆ ಅದು ಅತ್ಯಂತ ಗಾಢವಾಗಿರುತ್ತದೆ, ಮತ್ತು ಎಲ್ಲದಕ್ಕಿಂತಲೂ ಹೆಚ್ಚು ದಿವ್ಯಾನಂದ–ದಿಂದ ಕೂಡಿರುತ್ತದೆ ಮತ್ತು ಉಳಿದದ್ದೆಲ್ಲವನ್ನು ತನ್ನ ಎತ್ತರಕ್ಕೆ ಕೊಂಡೊಯ್ಯುತ್ತದೆ ಮತ್ತು ಅವುಗಳನ್ನು ದಾಟಿಯೂ ಹೋಗುತ್ತದೆ. ಅವನು ಗುರು ಹಾಗೂ ಮಾರ್ಗ–ದರ್ಶಕನಾಗಿರುತ್ತಾನೆ, ಮತ್ತು ನಮ್ಮನ್ನು ಜ್ಞಾನದತ್ತ ಮುನ್ನಡೆಸಿಕೊಂಡು ಹೋಗು–ತ್ತಾನೆ. ಅಭಿವೃದ್ಧಿ ಹೊಂದುತ್ತಿರುವ ಆಂತರಿಕ ಪ್ರಕಾಶದ ಪ್ರತಿಯೊಂದು ಹೆಜ್ಜೆಯಲ್ಲಿ ಅವನ ಸ್ಪರ್ಶದ ಭಾವನೆ ತಂದುಕೊಳ್ಳುತ್ತೇವೆ, ಅದು ಕಲಾಕಾರ ನಮ್ಮ ಮನಸ್ಸಿನ ಮಣ್ಣಿಗೆ ಆಕಾರ ಕೊಡುವಂತಿರುತ್ತದೆ, ಅವನ ಧ್ವನಿ ಸತ್ಯವನ್ನು ಹಾಗೂ ಆ ಧ್ವನಿಯ ಶಬ್ದವನ್ನು ತೆರೆದು ತೋರಿಸುತ್ತದೆ, ಅವನು ನಮಗೆ ಕೊಡುವ ಯೋಚನೆಗೆ ನಾವು ಸ್ಪಂದಿಸುತ್ತೇವೆ, ಅವನು ಬೀರುವ ಮಿಂಚಿನ ಭರ್ಚಿಯ ಬೆಳಕು ನಮ್ಮ ಅಜ್ಞಾನದ ಅಂಧಕಾರವನ್ನು ಹೊಡೆದೋಡಿಸುತ್ತದೆ. ವಿಶೇಷವಾಗಿ ಮನಸ್ಸಿನ ಭಾಗಶಃ ಪ್ರಕಾಶಗಳು ಆಧ್ಯಾತ್ಮಿಕ ರಹಸ್ಯ ಜ್ಞಾನದ ಪ್ರಕಾಶಗಳಾದ ಪ್ರಮಾಣದಲ್ಲಿ, ಅದು ಅತಿ ಸ್ವಲ್ಪ ಇಲ್ಲವೆ ಹೆಚ್ಚಿನ ಪ್ರಮಾಣದಲ್ಲಿ ಆಗಬಹುದು, ನಾವು ಅವನ ಮನೋ–ಧರ್ಮದಲ್ಲಿ ಪರಿವರ್ತನೆ ಹೊಂದಿರುವ ಭಾವನೆ ತಂದುಕೊಳ್ಳುತ್ತೇವೆ, ಮತ್ತು ಹೆಚ್ಚು ಹೆಚ್ಚಾಗಿ ಅವನು ನಮ್ಮಲ್ಲಿ ಚಿಂತಕ ಹಾಗೂ ದೃಷ್ಟಾರನಾಗುತ್ತಾನೆ. ನಾವು ನಮಗಾಗಿ ಯೋಚಿಸುವುದನ್ನು, ಕಾಣುವುದನ್ನು ನಿಲ್ಲಿಸಿಬಿಡುತ್ತೇವೆ, ಆದರೆ ಅವನು ನಮಗಾಗಿ ಯೋಚಿಸಲು ಸಂಕಲ್ಪಿಸಿದುದನ್ನು ಮಾತ್ರ ಯೋಚಿಸುತ್ತೇವೆ, ಮತ್ತು ಅವನು ನಮಗಾಗಿ ಕಾಣಬೇಕೆಂದು ಸಂಕಲ್ಪಿಸಿದುದನ್ನು ಮಾತ್ರ ಕಾಣುತ್ತೇವೆ. ಮತ್ತು ಆಗ ಗುರು ಪ್ರೇಮಿಯಲ್ಲಿ ನೆರವೇರಿಕೆ ಕಂಡುಕೊಂಡಿರುತ್ತಾನೆ; ಅವನು ನಮ್ಮ ಎಲ್ಲ ಮಾನಸಿಕ ಸತ್ತೆಯನ್ನು ಒಪ್ಪಿಕೊಳ್ಳಲು ಮತ್ತು ವಶವರ್ತಿಮಾಡಿಕೊಳ್ಳಲು, ಸಂತೋಷಪಡಲು ಮತ್ತು ಉಪಯೋಗಿಸಲು ಅದರ ಮೇಲೆ ತನ್ನ ಕೈಗಳ–ನ್ನಿರಿಸುತ್ತಾನೆ.

ಅವನು ಪ್ರಭು; ಆದರೆ ಅವನನ್ನು ಸಮೀಪಿಸುವ ಭಕ್ತಿ ಮಾರ್ಗದಲ್ಲಿ ಪ್ರತ್ಯೇಕಗೊಳಿಸುವ ಎಲ್ಲ ದೂರ, ವಿಸ್ಮಯ, ಭಯ ಮತ್ತು ಕೇವಲ ವಿಧೇಯವಾಗಿರುವಿಕೆ ಮಾಯವಾಗುತ್ತವೆ, ಏಕೆಂದರೆ ಇಂತಹ ವಿಷಯಗಳು ಉಳಿದುಕೊಳ್ಳಲು ಸಾಧ್ಯವಾಗದೆ ಇರುವ ಹಾಗೆ ನಾವು ಅವನಿಗೆ ಅತಿ ಹತ್ತಿರ ಇರುತ್ತೇವೆ ಮತ್ತು ಅವನೊಂದಿಗೆ ಏಕವಾಗಿರುತ್ತೇವೆ, ನಮ್ಮ ಸತ್ತೆಯ ಪ್ರೇಮಿಯಾದ ಅವನು ಅದನ್ನು ಕೈಗೆತ್ತಿಕೊಳ್ಳುತ್ತಾನೆ, ವ್ಯಾಪಿಸುತ್ತಾನೆ ಮತ್ತು ಅವನು ಸಂಕಲ್ಪಿಸಿದ ಹಾಗೆ ಅದನ್ನು ಉಪಯೋಗಿಸುತ್ತಾನೆ, ಅದಕ್ಕಾಗಿ ಮಾಡಬೇಕಾದುದನ್ನು ಮಾಡುತ್ತಾನೆ. ವಿಧೇಯತೆ ಸೇವಕನ ಕುರುಹಾಗಿರುತ್ತದೆ, ಆದರೆ ಈ ಸಂಬಂಧದಲ್ಲಿ ಅದು 'ದಾಸ್ಯ', ಅತಿ ಕನಿಷ್ಠ ಮಟ್ಟದ ಹಂತ, ನಂತರ ನಾವು ವಿಧೇಯರಾಗಿರುವುದಿಲ್ಲ, ಆದರೆ ಸಂಗೀತಗಾರನ ಕೈಯ ಚಲನೆಗೆ ತಂತಿ ಪ್ರತಿಸ್ಪಂದಿಸುವಂತೆ, ಅವನ ಸಂಕಲ್ಪದ ಪ್ರಕಾರ ಚಲಿಸುತ್ತೇವೆ. ಉಪಕರಣವಾಗಿರುವುದು ಸ್ವ–ಸಮರ್ಪಣೆಯ ಹಾಗೂ ಶರಣಾಗತಿಯ ಉಚ್ಚತರ ಹಂತ. ಆದರೆ ಇದು ಜೀವಂತವಿರುವ ಹಾಗೂ ಪ್ರೇಮಿಸುವ ಉಪಕರಣ, ಅದು ನಮ್ಮ ಇಡೀ ಸ್ವಭಾವದಲ್ಲಿ ಭಗವಂತನ ವಶವರ್ತಿಯಲ್ಲಿ, ದೈವೀ ಹಿಡಿತಕ್ಕೆ, ದಿವ್ಯಾನಂದದ ಅಧೀನತೆಗೆ, ಪ್ರಭುತ್ವಕ್ಕೆ ಅವನ ಗುಲಾಮನಾಗುವುದರಲ್ಲಿ ಅವನು ಅದು ಮಾಡಲೆಂದು ಸಂಕಲ್ಪಿಸಿದ್ದೆಲ್ಲವನ್ನು ಪ್ರಶ್ನಿಸದೆ, ಭಾವೋನ್ಮತ್ತತೆಯ ದಿವ್ಯಾನಂದದೊಂದಿಗೆ ಕೈಕೊಳ್ಳುತ್ತದೆ, ಅದು ಸಹಿಸಿಕೊಳ್ಳಬೇಕೆಂದು ಅವನು ಬಯಸಿದ್ದನ್ನು ಸಹಿಸಿಕೊಳ್ಳುತ್ತದೆ, ಏಕೆಂದರೆ ತಾಳಿಕೊಳ್ಳುವುದೆಲ್ಲ ಪ್ರೇಮಪಾತ್ರನ ಭಾರವಾಗಿರುತ್ತದೆ.

ಅವನು ಮಿತ್ರ, ಸಲಹೆ ನೀಡುವವನು, ಸಹಾಯಕ, ತೊಂದರೆಯಲ್ಲಿ, ವಿಪತ್ತಿನಲ್ಲಿ ಆಪದ್ರಕ್ಷಕ, ಶತ್ರುಗಳ ವಿರುದ್ಧ ರಕ್ಷಣೆ ನೀಡುವವನು, ನಮಗಾಗಿ ನಮ್ಮ ಸಮರಗಳಲ್ಲಿ ಹೋರಾಡುವ ಇಲ್ಲವೆ ನಮ್ಮ ಹೋರಾಟದಲ್ಲಿ ನಮಗೆ ರಕ್ಷಣೆ ನೀಡುವ ನಾಯಕ, ಸಾರಥಿ, ನಮ್ಮ ರೀತಿಗಳಿಗೆ ಮಾರ್ಗದರ್ಶಿ ಮತ್ತು ಇಲ್ಲಿ ನಾವು ಒಮ್ಮೆಗೆ ಅತಿ ಹತ್ತಿರದ ಅನ್ಯೋನ್ಯತೆಯಲ್ಲಿ ಬರುತ್ತೇವೆ, ಅವನು ಸಂಗಡಿಗ, ಸನಾತನ ಜೊತೆಗಾರ, ಜೀವನದ ಆಟದಲ್ಲಿ ಆಟದ ಸಂಗಾತಿ, ಹಾಗಿದ್ದಾಗ್ಯೂ ಅದೆಷ್ಟೇ ಸಂತೋಷಕರವಾಗಿದ್ದರೂ ಇಲ್ಲಿಯವರೆಗೆ ಅಲ್ಲಿ ಒಂದು ಬಗೆಯ ವಿಭಜನೆಯಿದೆ. ಉಪಕೃತಿ ಕಾಣಿಸಿಕೊಳ್ಳುವುದರ ಮೂಲಕ ಗೆಳೆತನ ಬಹಳ ಸೀಮಿತವಾಗಿರುತ್ತದೆ. ದೈವೀ ಪ್ರೇಮಿ ಗಾಯವನ್ನುಂಟು ಮಾಡಬಲ್ಲನು, ಕೈಬಿಡ–



ಬಲ್ಲನು, ನಮ್ಮೊಡನೆ ಕುಪಿತನಾಗಬಲ್ಲನು, ದ್ರೋಹವನ್ನುಂಟು ಮಾಡುವವನಂತೆ ತೋರಿಬರಬಲ್ಲನು, ಆದಾಗ್ಯೂ ನಮ್ಮ ಪ್ರೇಮ ಉಳಿದುಕೊಳ್ಳುತ್ತದೆ, ಅದಕ್ಕೂ ಹೆಚ್ಚಾಗಿ ಈ ವೈರುಧ್ಯಗಳಿಂದ ಬೆಳೆಯುತ್ತದೆ. ಅವು ಮತ್ತೆ ಏಕತೆ ಹಾಗೂ ವಶವರ್ತಿ ಪಡೆಯುವುದರ ಸಂತೋಷವನ್ನು ಹೆಚ್ಚಿಸುತ್ತವೆ. ಅವುಗಳ ಮೂಲಕ ಪ್ರೇಮಿ ಮಿತ್ರನಾಗಿ ಉಳಿಯುವನು ಮತ್ತು ಅವನು ಮಾಡುವುದು ಕೊನೆಯಲ್ಲಿ ನಮ್ಮ ಸತ್ತೆಯ ಪ್ರೇಮಿ, ಸಹಾಯಕನಿಂದ ಮಾಡಲಾಗಿರುತ್ತದೆ, ಅದು ನಮ್ಮ ಆತ್ಮದ ಪರಿಪೂರ್ಣತೆಗಾಗಿ ಮಾಡಲಾಗಿರುತ್ತದೆ ಮತ್ತು ಅವನು ನಮ್ಮಲ್ಲಿ ಕಂಡುಕೊಳ್ಳುವ ಸಂತೋಷಕ್ಕಾಗಿ ಮಾಡಲಾಗಿರುತ್ತದೆ. ಈ ವೈರುಧ್ಯಗಳು ಹೆಚ್ಚಿನ ಅನ್ಯೋನ್ಯತೆಯತ್ತ ಕೊಂಡೊಯ್ಯುತ್ತವೆ. ಅವನು ನಮ್ಮ ಸತ್ತೆಯ ತಂದೆ, ತಾಯಿ, ಮೂಲ ಹಾಗೂ ರಕ್ಷಕನಾಗಿರುತ್ತಾನೆ ಮತ್ತು ಅದರ ಇಚ್ಛೆ ಪೂರೈಸುವ ಪೋಷಕನಾಗಿರುತ್ತಾನೆ ಮತ್ತು ನಮ್ಮ ಬಯಕೆಗಳನ್ನು ಕೊಡುವವನಾಗಿರುತ್ತಾನೆ. ಅವನು ನಮ್ಮ ಬಯಕೆಗೆ ಜನಿಸಿದ ಮಗು, ಅವನನ್ನು ನಾವು ಪೋಷಿಸುತ್ತೇವೆ, ಸಾಕಿ ಸಲಹುತ್ತೇವೆ. ಈ ಎಲ್ಲ ವಿಷಯಗಳನ್ನು ಪ್ರೇಮಿ ಕೈಗೆತ್ತಿಕೊಳ್ಳುತ್ತಾನೆ. ಅವನ ಪ್ರೇಮ ತನ್ನ ಅನ್ಯೋನ್ಯತೆಯಲ್ಲಿ ಮತ್ತು ಏಕತೆಯಲ್ಲಿ ತಂದೆಯ ಹಾಗೂ ತಾಯಿಯ ಕಾಳಜಿಯನ್ನಿರಿಸುತ್ತದೆ ಮತ್ತು ನಾವು ಅದರ ಮೇಲೆ ಮಾಡುವ ಬೇಡಿಕೆಗಳಿಗೆ ಎಡೆಗೊಡುತ್ತದೆ. ಆ ಆಳಾತಿಆಳದ ಬಹುಮುಖದ ಸಂಬಂಧದಲ್ಲಿ ಎಲ್ಲವೂ ಏಕತ್ರವಾಗಿರುತ್ತದೆ.

ಪ್ರಾರಂಭದಿಂದಲೇ ಪ್ರೇಮಿ ಹಾಗೂ ಪ್ರೇಮಪಾತ್ರರ ಈ ನಿಕಟ ಸಂಬಂಧವಿರುವುದು ಸಾಧ್ಯವಿದೆ, ಆದರೆ ಅದು ಸಮಗ್ರ ಯೋಗದ ಸಾಧಕನಿಗೆ ಕೆಲವೊಂದು ಪ್ರತ್ಯೇಕವಾದ, ಕೇವಲ ಭಾವಪರವಶತೆಯಿರುವ ಭಕ್ತಿಯ ಮಾರ್ಗದ ಹಾಗಿರುವುದಿಲ್ಲ. ಅದು ಪ್ರಾರಂಭದಿಂದ ಇತರ ಸಂಬಂಧಗಳಿಗಿರುವ ವರ್ಣಗಳಲ್ಲಿ ಒಂದಿಷ್ಟನ್ನು ತನ್ನಲ್ಲಿ ಒಳಗೊಂಡಿರುತ್ತದೆ, ಏಕೆಂದರೆ ಅವನು ಜ್ಞಾನ ಹಾಗೂ ಕರ್ಮಗಳನ್ನು ಅನುಸರಿಸುತ್ತಾನೆ ಮತ್ತು ಭಗವಂತ ಅವನಿಗೆ ಗುರು, ಮಿತ್ರ ಹಾಗೂ ಪ್ರಭುವಾಗಿರುವ ಆವಶ್ಯಕತೆ ಇದೆ. ಭಗವಂತನಿಗಾಗಿ ಬೆಳೆಯುತ್ತಿರುವ ಪ್ರೇಮದ ಜೊತೆಗೆ ಭಗವಂತನ ಬಗೆಗಿರುವ ಜ್ಞಾನದ ವಿಸ್ತಾರ ಮತ್ತು ಅವನ ಸ್ವಭಾವ ಹಾಗೂ ಜೀವನಗಳಲ್ಲಿ ದೈವೀ ಸಂಕಲ್ಪದ ಕ್ರಿಯೆ ಇವುಗಳನ್ನು ಕೊಂಡೊಯ್ಯಬೇಕು. ದೈವೀ ಪ್ರೇಮಿ ತನ್ನನ್ನು ತೆರೆದು ತೋರಿಸುತ್ತಾನೆ, ಜೀವನವನ್ನು ತನ್ನ ವಶವರ್ತಿ ಮಾಡಿಕೊಳ್ಳುತ್ತಾನೆ. ಆದಾಗ್ಯೂ ಸಾರಭೂತ ಸಂಬಂಧವು ಪ್ರೇಮದ್ದಾಗಿರುತ್ತದೆ. ಅದರಿಂದ

ಎಲ್ಲ ವಿಷಯಗಳು ಪ್ರವಹಿಸುತ್ತವೆ : ಭಾವೋದ್ರೇಕದ ಪ್ರೇಮ, ಸಂಪೂರ್ಣ ಪ್ರೇಮ, ನೆರವೇರಿಕೆಗಾಗಿ ನೂರಾರು ಮಾರ್ಗಗಳನ್ನು ಅರಸುವಂತಹ ಪ್ರೇಮ, ಪರಸ್ಪರ–ರನ್ನು ವಶವರ್ತಿ ಮಾಡಿಕೊಳ್ಳಲು ಪ್ರತಿಯೊಂದು ಸಾಧನವನ್ನು ಉಪಯೋಗಿಸುವ ಪ್ರೇಮ, ಏಕತೆಯ ಆನಂದಕ್ಕಾಗಿರುವ ಲಕ್ಷಾನುಗಟ್ಟಲೆ ಮುಖಗಳಿರುವ ಪ್ರೇಮ. ಮನಸ್ಸಿನ ಎಲ್ಲ ಭೇದ ಮಾಡುವಿಕೆ, ಅದರ ಎಲ್ಲ ಅಡೆತಡೆಗಳು, "ಸಾಧ್ಯವಿಲ್ಲ" ಎಂದು ಹೇಳುತ್ತಿರುವುದು, ತರ್ಕದ ಭಾವಶೂನ್ಯ ವಿಶ್ಲೇಷಣೆ ಇವೆಲ್ಲ ಆ ಪ್ರೇಮದಿಂದ ಅಣಕಕ್ಕೊಳಗಾಗುತ್ತವೆ, ಇಲ್ಲವೆ ಅವುಗಳನ್ನು ಪರೀಕ್ಷೆಗೆಂದು, ಏಕತೆಗಾಗಿ ಇರುವ ಕ್ಷೇತ್ರಗಳೆಂದು, ದ್ವಾರಗಳೆಂದು ಉಪಯೋಗಿಸಲಾಗುತ್ತದೆ. ಪ್ರೇಮ ನಮಗೆ ಹಲ–ವಾರು ರೀತಿಗಳಲ್ಲಿ ಬರುತ್ತದೆ, ಅದು ಪ್ರೇಮಿಯ ಸೌಂದರ್ಯಕ್ಕೆ ಎಚ್ಚೆತ್ತುಕೊಳ್ಳುವ ರೀತಿಯಲ್ಲಿ ಬರಬಹುದು. ಆದರ್ಶ ಮುಖವನ್ನು ಹಾಗೂ ಅದರ ಪ್ರತೀಕವನ್ನು ನೋಡಿ ಬರಬಹುದು, ಜಗತ್ತಿನಲ್ಲಿರುವ ಸಾವಿರಾರು ವಸ್ತುಗಳ ಹಿಂದಿರುವ ತನ್ನ ಬಗೆಗಿರುವ ರಹಸ್ಯಪೂರ್ಣ ಸೂಚನೆಗಳ ಮೂಲಕ ಬರಬಹುದು, ಹೃದಯದ ನಿಧಾನಗತಿಯ ಇಲ್ಲವೆ ಒಮ್ಮೆಗೆ ಉಂಟಾದ ಆವಶ್ಯಕತೆಯಿಂದ ಬರಬಹುದು, ಆತ್ಮದಲ್ಲಿಯ ಅಸ್ಪಷ್ಟ ತೃಷೆಯಿಂದ ಬರಬಹುದು, ನಮ್ಮ ಹತ್ತಿರವಿರುವ ಯಾರೋ ಒಬ್ಬರು ನಮ್ಮನ್ನು ಎಳೆಯುತ್ತಿರುವ ಇಲ್ಲವೆ ಪ್ರೇಮದಿಂದ ಬೆಂಬತ್ತಿರುವ ಭಾವನೆ ತಂದುಕೊಳ್ಳುವುದರಿಂದ ಬರಬಹುದು, ಇಲ್ಲವೆ ದಿವ್ಯಾನಂದವಿರುವ, ಸೌಂದರ್ಯ ಇರುವ ಯಾರೋ ಒಬ್ಬರನ್ನು ನಾವು ಶೋಧಿಸಬೇಕಾದುದರಿಂದ ಬರಬಹುದು.

ನಾವು ಅವನನ್ನು ಭಾವೋದ್ರೇಕದಿಂದ ಅರಸಬಹುದು ಮತ್ತು ಗೋಚರಿಸದ ಪ್ರೇಮಿಯನ್ನು ಬೆಂಬತ್ತಬಹುದು, ಆದರೆ ಹಾಗೆಯೇ ನಮ್ಮ ಯೋಚನೆಗೆ ಬಂದಿರದ ಪ್ರೇಮಿ ನಮ್ಮನ್ನು ಬೆಂಬತ್ತಬಹುದು, ನಮಗೆ ಜಗತ್ತಿನ ಮಧ್ಯದಲ್ಲಿ ಎದುರಾಗಬಹುದು ಮತ್ತು ತನಗಾಗಿ ನಮ್ಮನ್ನು ಹಿಡಿದುಕೊಳ್ಳಬಹುದು, ಮೊದಲು ನಾವು ಬಯಸಬಹುದು ಇಲ್ಲವೆ ಬಯಸದೆ ಇರಬಹುದು. ಹಾಗೆಯೇ ಮೊದಲು ಅವನು ನಮ್ಮ ಶತ್ರುವಿನ ರೂಪದಲ್ಲಿ ಬರಬಹುದು, ಪ್ರೇಮದಿಂದ ಕೋಪಗೊಂಡಿರಬಹುದು ಮತ್ತು ಅವನೊಡನೆ ನಮ್ಮ ಮೊದಲಿನ ಸಂಬಂಧಗಳು ಕದನ, ಹೋರಾಟಗಳ ರೀತಿಯವಾಗಿರಬಹುದು. ಮೊದಲು ಪ್ರೇಮ ಹಾಗೂ ಆಕರ್ಷಣೆಗಳಿದ್ದಲ್ಲಿ, ಭಗವಂತ ಮತ್ತು ಆತ್ಮ ಇವರ ನಡುವಿನ ಸಂಬಂಧಗಳು ಇನ್ನೂ ಬಹಳ ಕಾಲದವರೆಗೆ ತಪ್ಪು ತಿಳಿವಳಿಕೆಯಿಂದ, ನೊಂದ ಮನಸ್ಸಿನಿಂದ



ಮತ್ಸರ ಹಾಗೂ ಕೋಪಗಳಿಂದ, ತಿಕ್ಕಾಟ ಹಾಗೂ ಪ್ರೇಮದ ಜಗಳಗಳಿಂದ, ಭರವಸೆ ನಿರಾಸೆಗಳಿಂದ, ವಿರಹ ಹಾಗೂ ಪ್ರತ್ಯೇಕವಾಗಿರುವಿಕೆಯಿಂದ ವೈವಿಧ್ಯ–ಗೊಂಡಿರಬಹುದು, ಕೇವಲ ಏಕತೆಯ ದಿವ್ಯಾನಂದದ ಅತ್ಯುತ್ಸಾಹದಲ್ಲಿ ಶುದ್ಧೀಕರಣ ಪಡೆಯುವವರೆಗೆ ಹೃದಯದ ಎಲ್ಲ ಭಾವೋದ್ರೇಕಗಳನ್ನು ಅವನ ಮೇಲೆ ಚೆಲ್ಲಿಕೊಡಲಾಗಿರುತ್ತದೆ. ಆದರೆ ಅದೂ ಕೂಡ ಏಕತಾನತೆಯಲ್ಲ, ಕೊನೆಯ ಏಕತೆ ಮತ್ತು ದೈವೀ ಪ್ರೇಮದ ಎಲ್ಲ ಸನಾತನ ವೈವಿಧ್ಯ ಕುರಿತು ಮಾನವನ ನಾಲಿಗೆಗೆ ಹೇಳಲು ಸಾಧ್ಯವಾಗುವುದಿಲ್ಲ. ನಮ್ಮ ಉಚ್ಚತರ ಹಾಗೂ ನಿಮ್ನತರ ಅಂಗಗಳು, ಹಾಗೆಯೇ ಮನಸ್ಸು, ಪ್ರಾಣಗಳು, ಅವುಗಳಿಗೆ ಕಡಿಮೆಯಲ್ಲದ ರೀತಿಯಲ್ಲಿ ಆತ್ಮ, ಅದರ ಪ್ರವಾಹದಲ್ಲಿ ಮುಳುಗಿ ಹೋಗಿರುತ್ತವೆ, ಭೌತಿಕ ದೇಹಕ್ಕೂ ಕೂಡ ಸ್ಪರ್ಶದ ಭಾವನೆ ಬರುತ್ತದೆ, ಆ ಪ್ರೇಮದ ಆ ಆನಂದದಲ್ಲಿ ಪಾಲಿರುತ್ತದೆ, ಅದರ ಎಲ್ಲ ಅಂಗಗಳಲ್ಲಿ, ನರಗಳಲ್ಲಿ ಧಮನಿಗಳಲ್ಲಿ ತುಂಬಿಕೊಂಡು ಹರಿಯುತ್ತದೆ. ದೈವೀ ಪ್ರೇಮ ಮತ್ತು ಆನಂದ ಸತ್ತೆಯ ಕೊನೆಯ ಶಬ್ದಗಳು, ಗುಟ್ಟಾದವುಗಳಲ್ಲಿ ಗುಟ್ಟಾದ, ರಹಸ್ಯಗಳಲ್ಲಿ ರಹಸ್ಯವಾದ ವಿಷಯಗಳು.

ಹೀಗೆ ವಿಶ್ವಂಭರಗೊಳಿಸಿದ, ವ್ಯಕ್ತೀಕರಣಗೊಳಿಸಿದ, ಅದರ ಅತ್ಯಂತ ಗಾಢತೆಗೆ ಮೇಲಕ್ಕೆತ್ತಲ್ಪಟ್ಟ, ಎಲ್ಲವನ್ನೂ ವ್ಯಾಪಿಸಿಕೊಳ್ಳುವಂತೆ, ಅಪ್ಪಿಕೊಳ್ಳುವಂತೆ ಮಾಡಿದ, ಎಲ್ಲವನ್ನೂ ನೆರವೇರಿಸಿಕೊಡುವ ಭಕ್ತಿಯ ಹಾಗೂ ದಿವ್ಯಾನಂದದ ಮಾರ್ಗ ಪರಮೋಚ್ಚ ವಿಮೋಚನೆಯನ್ನು ತಂದುಕೊಡುತ್ತದೆ. ಅದರ ತುತ್ತ ತುದಿ ಎಂದರೆ ಉಚ್ಚವಾದ ವಿಶ್ವವ್ಯಾಪಿ ಏಕತೆ. ಆದರೆ ಪ್ರೇಮಕ್ಕೆ ಸಂಪೂರ್ಣ ಏಕತೆ ಮುಕ್ತಿಯಾಗಿದೆ. ಮುಕ್ತಿಗೆ ಬೇರೆ ಇನ್ನಾವ ಅರ್ಥವೂ ಇಲ್ಲ, ಎಲ್ಲ ಬಗೆಯ ಮುಕ್ತಿಗಳನ್ನು ಅದು ಒಳಗೊಳ್ಳುತ್ತದೆ. ಅವು ಕೊನೆಯಲ್ಲಿ, ಕೆಲವರು ಹೊಂದಲು ಬಯಸುವಂತೆ, ಕೇವಲ ಒಂದರ ನಂತರ ಒಂದರಂತೆ ಬರುವ ಮತ್ತು ಆ ಕಾರಣದಿಂದಾಗಿ ಒಂದು ಇನ್ನೊಂದರಿಂದ ಪ್ರತ್ಯೇಕವಾಗಿರುವ ಮುಕ್ತಿಗಳಲ್ಲಿ ಮಾನವ ಆತ್ಮದೊಡನೆ ಭಗವಂತನ ಪರಿಪೂರ್ಣ ಏಕತೆ ಇರುವ ಮುಕ್ತಿ ಸಾಯುಜ್ಯ, ವ್ಯತ್ಯಾಸವಿರುವುದೆಲ್ಲದರ ವಾಸ್ತವಾಂಶವನ್ನು ಅದರಲ್ಲಿ ತೆರೆದು ತೋರಿಸಲಾಗಿರುತ್ತದೆ, ಆದರೆ ಅಲ್ಲಿರುವ ವ್ಯತ್ಯಾಸ ಕೇವಲ ಏಕತೆಯ ರೂಪದಲ್ಲಿ–ರುವುದಾಗಿರುತ್ತದೆ. ಸಾಮೀಪ್ಯ: ಪರಸ್ಪರ ಉಪಸ್ಥಿತಿ ಹತ್ತಿರವಾಗಿರುವಾಗಿನ ಆನಂದದ ಸ್ಥಿತಿ. ಸಾಲೋಕ್ಯ: ಪರಸ್ಪರರಲ್ಲಿ ಬಿಂಬಿತವಾಗಿರುವುದು, ಅದನ್ನು ನಾವು

ಹೋಲಿಕೆ ಎಂದು ಕರೆಯುತ್ತೇವೆ; ಸಾದೃಶ್ಯ ಮತ್ತು ಇತರ ವಿಷಯಗಳೂ ಇವೆ, ಅವುಗಳಿಗೆ ಭಾಷೆಯಲ್ಲಿ ಇನ್ನೂ ಹೆಸರು ಕೊಡಲಾಗಿಲ್ಲ. ಭಗವಂತನ ಪ್ರೇಮಿಗೆ ದೊರಕಿಸಲಾಗದ ವಿಷಯ ಯಾವುದೂ ಇರುವುದಿಲ್ಲ, ಅವನಿಗೆ ಯಾವುದನ್ನೂ ನಿರಾಕರಿಸಲಾಗುವುದಿಲ್ಲ, ಏಕೆಂದರೆ ದೈವೀ ಪ್ರೇಮಪಾತ್ರನಿಗೆ ಅವನು ಅಚ್ಚು-ಮೆಚ್ಚಿನವನಾಗಿರುತ್ತಾನೆ, ಮತ್ತು ಅವನು ದೈವೀ ಪ್ರೇಮಿಯ ಆತ್ಮವಾಗಿರುತ್ತಾನೆ.

**– ಶ್ರೀ ಅರವಿಂದರು**

-oo0oo-

## ವಾರ್ತಾಪತ್ರ

**ಶ್ರೀ ಅರವಿಂದೋ ಸಂಕೀರ್ಣ,**

ಜೆ.ಪಿ. ನಗರ 1ನೇ ಹಂತ, ಬೆಂಗಳೂರು-78.

ಶ್ರೀ ಅರವಿಂದೋ ಸಂಕೀರ್ಣದ ಸಾಂಸ್ಕೃತಿಕ ಸಭಾಭವನದಲ್ಲಿ ಪ್ರತಿ ತಿಂಗಳ ಎರಡನೇ ಭಾನುವಾರ ಬೆಳಿಗ್ಗೆ 10.30 ರಿಂದ 12.00 ಗಂಟೆಯವರೆಗೆ ಉಪನಿಷತ್ ಬಗ್ಗೆ ಡಾ॥ ಆರ್. ಎಲ್. ಕಶ್ಯಪ್ ರವರು ಉಪನ್ಯಾಸ ನೀಡುವರು.



# REVISION OF THE SOCIETY'S MEMBERSHIP FEES IN INDIA

### With effect from 1st April, 2009

| Sl.No. | Membership Category | Amount in Rs. |
|---|---|---|
| 1. | Member with Magazine | |
| | For One Year | 150 |
| | For Three Years | 440 |
| | For Five Years | 730 |
| 2. | Donor Member | |
| | For 10 Years | 3000 |
| 3. | Contributing Member | |
| | For One Year | 300 |
| 4. | Contributing Donor Memeber | |
| | For 15 Years | 10,000 |